
ನವಸಾಕ್ಷರ ಪುಸ್ತಕ ಮಾಲೆ ೧೬

ಶ್ರೀ ರಾಮಕೃಷ್ಣ ಪರಮಹಂಸ

ಎಚ್. ಎಸ್. ಮುರಳೀಧರ






ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಸಂಪಾದಕ ಸಮಿತಿ

ಲೋಕಶಿಕ್ಷಣ ನಿರ್ದೇಶನಾಲಯ

ನವಸಾಕ್ಷರ ಪುಸ್ತಕ ಮಾಲೆ - ೧೬



ಶ್ರೀ ರಾಮಕೃಷ್ಣ ಪರಮಹಂಸ

ಎಚ್. ಎಸ್. ಮುರಳೀಧರ



ಪ್ರಸಾರಾಂಗ

ಕನ್ನಡ ವಿಶ್ವವಿದ್ಯಾಲಯ

ಹಂಪಿ-೫೮೩ ೨೭೬

KADALU : by H. Nagaveni, Published by The Director of Prasaranga, Kannada University, Hampi - 583 211. KARNATAKA. First Impression 1994, Pp. ii + 26, Rs. 8.00


ಸಂಯೋಜನಾಧಿಕಾರಿ
ಎಚ್. ಎಸ್. ಶ್ರೀಮತಿ
ಪಠ್ಯ ಪುಸ್ತಕ ರಚನಾ ವಿಭಾಗ

ಪ್ರಕಾಶಕರು
ನಿರ್ದೇಶಕರು
ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ
ಹಂಪಿ - ೫೮೩ ೨೧೧

ಮುಖಪುಟ ವಿನ್ಯಾಸ
ಕೆ. ಮಕಾಳಿ

ಬೆಲೆ : ರೂ. ೮.೦೦


ಮುದ್ರಕರು
ವಿನಾಯಕ ಆಫ್‌ಸೆಟ್ ಪ್ರಿಂಟರ್ಸ್
8/1, ಮಾರೇನಹಳ್ಳಿ, 1ನೇ ಕ್ರಾಸ್, 23ನೇ ಮೇನ್,
ಜೆ. ಪಿ. ನಗರ, ಬೆಂಗಳೂರು-560 078.
ಫೋನ್: 642102



ಶ್ರೀ ರಾಮಕೃಷ್ಣ ಪರಮಹಂಸ

"ರಾಮಕೃಷ್ಣ ಪರಮಹಂಸರ ಜೀವನದ ಕಥೆಯೆಂದರೆ, ಅದು ಧರ್ಮದ ಆಚರಣೆಯ ಕಥೆ. ನಾವು ದೇವರನ್ನು ಎದುರಿಗೇ ಕಾಣುವಂತೆ ಮಾಡುತ್ತದೆ ಅವರ ಜೀವನ. ಅಹಿಂಸೆಗೆ ಅವರ ಜೀವನ ಒಂದು ಜೀವಂತ ಉದಾಹರಣೆ. ಅವರ ಪ್ರೀತಿಗೆ ಪ್ರದೇಶದ ಮಿತಿಯಾಗಲಿ, ಅಥವಾ ಇನ್ನಾವುದೇ ಮಿತಿಯಾಗಲಿ ಇರಲಿಲ್ಲ. ಅವರ ದೈವೀ ಪ್ರೇಮವು ಎಲ್ಲರಿಗೂ ಸ್ಫೂರ್ತಿಯನ್ನು ನೀಡಲಿ!"

ರಾಮಕೃಷ್ಣ ಪರಮಹಂಸರ ಜೀವನದ ಬಗೆಗೆ ಈ ಮೇಲಿನ ಮಾತುಗಳನ್ನು ಆಡಿದವರು ಮಹಾತ್ಮಾ ಗಾಂಧೀಜಿ. ದೇವರ ಹೆಸರಿನಲ್ಲಿ, ಧರ್ಮದ ಹೆಸರಿನಲ್ಲಿ ಭಯಂಕರ ಕಚ್ಚಾಟ ನಡೆಯುವುದನ್ನು ನಾವಿಂದು ನೋಡುತ್ತಿದ್ದೇವೆ. ಅದು ಮನುಷ್ಯ ಮನುಷ್ಯರ ನಡುವೆ ಒಡೆಯಲಾಗದಂತಹ ಗೋಡೆಗಳನ್ನು ಕಟ್ಟಿಬಿಟ್ಟಿದೆ. ರಾಮಕೃಷ್ಣ ಪರಮಹಂಸರ ಜೀವನದ ಚರಿತ್ರೆಯನ್ನು ಓದಿದಾಗ, ಈ ಭೇದಭಾವನೆಗಳು ಎಷ್ಟು ಪೊಳ್ಳು ಎಂಬುದರ ಅರಿವಾಗುತ್ತದೆ.



ಶ್ರೀ ರಾಮಕೃಷ್ಣ ಪರಮಹಂಸರು

ರಾಮಕೃಷ್ಣ ಪರಮಹಂಸರ ಮೊದಲಿನ ಹೆಸರು 'ಗದಾಧರ'. ಅವರು ಹುಟ್ಟಿದ್ದು ಸಾವಿರದ ಎಂಟುನೂರಾ ಮೂವತ್ತಾರನೆಯ ಇಸವಿ ಫೆಬ್ರವರಿ ತಿಂಗಳ ಹದಿನೆಂಟನೆಯ ತಾರೀಕು;ಪಶ್ಚಿಮ ಬಂಗಾಳದ 'ಕಾಮಾರಪುಕುರ' ಎಂಬ ಸಣ್ಣ ಹಳ್ಳಿಯಲ್ಲಿ. ಇದು ಕಲ್ಕತ್ತದಿಂದ ಪಶ್ಚಿಮಕ್ಕೆ ಎಪ್ಪತ್ತು ಮೈಲಿ ದೂರದಲ್ಲಿದೆ. ಅವರ ತಂದೆಯ ಹೆಸರು ಕ್ಷುದೀರಾಮ ಚಟ್ಟೋಪಾಧ್ಯಾಯ; ತಾಯಿ ಚಂದ್ರಮಣೀದೇವಿ. ಗಯೆಯ ಗದಾಧರನ ವರಪ್ರಸಾದದಿಂದ ಹುಟ್ಟಿದ್ದರಿಂದ, ಅವರು ಮಗುವಿಗೆ 'ಗದಾಧರ' ಎಂದು ಹೆಸರಿಟ್ಟರು. 'ಗದಾಧರ' ಎಂದರೆ ಗದೆಯನ್ನು ಹಿಡಿದವನು, 'ವಿಷ್ಣು' ಎಂದರ್ಥ.

ಗದಾಧರನಿಗೆ ಐದುವರ್ಷವಾದಾಗ ಅವನನ್ನು ಹಳ್ಳಿಯ ಶಾಲೆಗೆ ಸೇರಿಸಿದರು. ಆದರೆ ಶಾಲೆಯ ಓದು ಅಷ್ಟಾಗಿ ಅವನ ತಲೆಗೆ ಹತ್ತಲಿಲ್ಲ. ಲೆಕ್ಕವಂತೂ ಅವನಿಗೆ ತಲೆನೋವನ್ನೇ ತರುತ್ತಿತ್ತು. ಹಾಡು ಹೇಳುವುದು, ಗೆಳೆಯರೊಂದಿಗೆ ನಾಟಕ ಆಡುವುದು ಎಂದರೆ ಅವನಿಗೆ ತುಂಬ ಇಷ್ಟ. ಜೊತೆಗೆ ಚಿತ್ರ ಬರೆಯುವುದು, ಮಣ್ಣಿನ ಬೊಂಬೆಗಳನ್ನು ಮಾಡುವುದು ಇವುಗಳಲ್ಲಿ ಅವನಿಗೆ ಹೆಚ್ಚಿನ ಆಸಕ್ತಿ.

ಹಳ್ಳಿಯ ಹಸಿರು ಹೊಲಗಳು, ತಾವರೆಯ ಕೊಳಗಳು, ಪಕ್ಷಿಗಳು, ಆಕಾಶ, ಮೋಡ ಎಲ್ಲವನ್ನೂ ಅವನು ತುಂಬ ಪ್ರೀತಿಸುತ್ತಿದ್ದ. ಒಮ್ಮೆ ಅವನೊಬ್ಬನೇ ಬತ್ತದ ಗದ್ದೆಗಳ ನಡುವೆ ಕಡಲೆಪುರಿ ತಿನ್ನುತ್ತ ನಡೆದುಹೋಗುತ್ತಿದ್ದ. ಸುತ್ತಲೂ ಹಸಿರು, ಮೇಲೆ ಕಪ್ಪು ಮೋಡಗಳು ಇವುಗಳ ಸೌಂದರ್ಯವನ್ನು ಅವನು ಮನಸಾರೆ ಸವಿಯುತ್ತಿದ್ದ. ಆಗ ಇದ್ದಕ್ಕಿದ್ದಂತೆ ಎಲ್ಲಿಂದಲೋ ಅಚ್ಚ ಬಿಳಿಯ ಬಣ್ಣದ ಕೊಕ್ಕರೆಗಳ ಸಾಲೊಂದು ಕಪ್ಪು ಮೋಡಗಳ ಕೆಳಗೆ ಹಾರಿಹೋಯಿತು. ಗದಾಧರನ ಮನಸ್ಸು ಈ ದೃಶ್ಯದಲ್ಲೇ ಎಷ್ಟರ ಮಟ್ಟಿಗೆ ನಾಟಿತೆಂದರೆ, ಅವನು ಪ್ರಜ್ಞೆ ತಪ್ಪಿ ಬಿದ್ದುಬಿಟ್ಟ. ಕೈಯಲ್ಲಿದ್ದ ಪುರಿ ಚಲ್ಲಾಪಿಲ್ಲಿಯಾಯಿತು. ಅವನನ್ನು ಕಂಡ ಯಾರೋ ಮನೆಗೆ

ಕರೆದುಕೊಂಡು ಹೋಗಿ ಉಪಚರಿಸಿದ ಮೇಲೆಯೇ, ಅವನಿಗೆ ಪ್ರಜ್ಞೆ ಮರಳಿದ್ದು. ಇನ್ನೊಮ್ಮೆ ಶಿವರಾತ್ರಿಯಂದು ಗದಾಧರ ಹಳ್ಳಿಯ ನಾಟಕದಲ್ಲಿ ಶಿವನ ಪಾತ್ರ ಮಾಡಿದ್ದ. ಆಗಲೂ ಅವನು ಹೀಗೆಯೇ ಪ್ರಜ್ಞೆ ತಪ್ಪಿಬಿಟ್ಟಿದ್ದ.

ಗದಾಧರನಿಗೆ ಒಂಬತ್ತು ವರ್ಷವಾದಾಗ ಅವನಿಗೆ ಉಪನಯನ ಮಾಡಬೇಕೆಂದುಕೊಂಡರು. ಈ ಉಪನಯನದಲ್ಲಿ ಬ್ರಾಹ್ಮಣ ಬಾಲಕ ಸಮಾಜದಲ್ಲಿ ತನ್ನ ವರ್ಣದ ಹಿರಿಯ ಹೆಂಗಸಿನಿಂದ ಭಿಕ್ಷೆ ತೆಗೆದುಕೊಳ್ಳುವುದು ಪದ್ಧತಿ. ಆದರೆ ಗದಾಧರನ ಆಲೋಚನೆ ಬೇರೆಯಾಗಿತ್ತು.

ಆ ಹಳ್ಳಿಯಲ್ಲಿ ಧನಿ ಎಂಬ ಕಮ್ಮಾರರ ಹೆಂಗಸೊಬ್ಬಳಿದ್ದಳು. ಅವಳು



ಕಮ್ಮಾರ ಹೆಂಗಸಿನಿಂದ ಮೊದಲ ಭಿಕ್ಷೆ

ಗದಾಧರನನ್ನು ತುಂಬ ಪ್ರೀತಿಯಿಂದ ಕಾಣುತ್ತಿದ್ದಳು. ಅವನೂ ಅವಳನ್ನು ತುಂಬ ಹಚ್ಚಿಕೊಂಡಿದ್ದ. ತನಗೆ ಉಪನಯನವಾದಾಗ ಅವಳಿಂದಲೇ ಮೊದಲ ಭಿಕ್ಷೆ ತೆಗೆದುಕೊಳ್ಳುವುದಾಗಿ ಅವನು ಹಿಂದೆಯೇ ಮಾತು ಕೊಟ್ಟುಬಿಟ್ಟಿದ್ದ.

ಇದನ್ನು ಗದಾಧರನ ಅಣ್ಣ ರಾಮಕುಮಾರ ವಿರೋಧಿಸಿದ. ಗದಾಧರ ತನ್ನ ಪಟ್ಟು ಬಿಡಲಿಲ್ಲ. "ನಾನೀಗ ಅವಳಿಂದ ಭಿಕ್ಷೆ ತೆಗೆದುಕೊಳ್ಳದಿದ್ದರೆ ಸುಳ್ಳು ಹೇಳಿದಂತಾಗುತ್ತದೆ. ಸುಳ್ಳುಗಾರ ಉಪನಯನಕ್ಕೆ ಯೋಗ್ಯನೇ?" ಎಂದು ಕೇಳಿದ. ಇದಕ್ಕೆ ಯಾರ ಬಳಿಯೂ ಉತ್ತರವಿರಲಿಲ್ಲ. ಕೊನೆಗೂ ಅವನ ಹಟವೇ ಗೆದ್ದಿತು. ಧನಿಗಂತೂ ಆನಂದವಾಯಿತು.

ಗಧಾದರ ಇನ್ನೂ ಚಿಕ್ಕವನಾಗಿರುವಾಗಲೇ ತಂದೆಯನ್ನು ಕಳೆದುಕೊಂಡ. ಅವನ ಕುಟುಂಬ ತುಂಬ ಕಷ್ಟಕ್ಕೆ ಸಿಲುಕಿತು. ಆಗ ಅವನ ಅಣ್ಣ ರಾಮಕುಮಾರ ಕಲ್ಕತ್ತಕ್ಕೆ ಹೋಗಿ ಸಂಸ್ಕೃತ ಪಾಠಶಾಲೆಯನ್ನು ತೆರೆದ. ಅಲ್ಲಿ ಅವನಿಗೆ ಸಹಾಯಕ್ಕೆ ಒಬ್ಬರು ಬೇಕಾಯಿತು. ಹಳ್ಳಿಗೆ ಬಂದು ಗದಾಧರನನ್ನು ಕರೆದುಕೊಂಡು ಹೋಗಲು ರಾಮಕುಮಾರ ಯೋಚಿಸಿದ.

ಆದರೆ ಹಳ್ಳಿಯನ್ನು ಬಿಟ್ಟುಹೋಗಲು ಗದಾಧರನಿಗೆ ಸ್ವಲ್ಪವೂ ಮನಸ್ಸಿರಲಿಲ್ಲ. ಹಳ್ಳಿಯವರಿಗಂತೂ ಅವನು ಅಚ್ಚುಮೆಚ್ಚು. ಆದರೇನು ಮಾಡುವುದು? ಹೊರಡಲೇ ಬೇಕಾಯಿತು. ಆಗ ಅವನಿಗೆ ಹದಿನೇಳು ವರ್ಷ.

ಕಲ್ಕತ್ತದಲ್ಲಿ ರಾಮಕುಮಾರ ತಮ್ಮನಿಗೆ ಹೊಸದಾಗಿ ವಿದ್ಯಾಭ್ಯಾಸ ಪ್ರಾರಂಭಿಸಲು ಹೇಳಬೇಕೆಂದುಕೊಂಡ. ಆದರೆ ಸ್ವಲ್ಪ ಯೋಚಿಸಿ, "ಗದಾಧರ ಹಳ್ಳಿಯನ್ನು ಮರೆಯಲು ಇನ್ನೂ ಕೆಲಕಾಲ ಬೇಕು. ಆಮೇಲೆ ಹೇಳುತ್ತೇನೆ" ಎಂದುಕೊಂಡ. ಹೀಗೆಯೇ ಕೆಲದಿನ ಕಳೆಯಿತು. ಗದಾಧರನಿಗೆ ಓದಿನ ಕಡೆಗೆ ಗಮನವೇ

ಇಲ್ಲ. ಕೊನೆಗೊಂದು ದಿನ ರಾಮಕುಮಾರ ಹೇಳಿದ: "ನೋಡು, ನೀನೀಗ
ದೊಡ್ಡವನಾಗಿರುವೆ. ಆದರೂ ನೀನು ಹೇಳಿಕೊಳ್ಳುವಂತಹ ವಿದ್ಯೆಯನ್ನೇನೂ ಕಲಿತಿಲ್ಲ
ನೀನೀಗ ವಿದ್ಯಾಭ್ಯಾಸ ಪ್ರಾರಂಭಿಸಬೇಕೆಂದು ನನ್ನ ಇಷ್ಟ".

ಇದಕ್ಕೆ ಗದಾಧರ ಹೇಳಿದ "ಅಣ್ಣ, ಕೇವಲ ಹೊಟ್ಟೆಪಾಡಿನ ವಿದ್ಯೆಯಿಂದ
ಏನು ಪ್ರಯೋಜನ ? ಜೀವನದ ಪ್ರಶ್ನೆಗಳಿಗೆ ಉತ್ತರ ಕೊಡುವ ವಿದ್ಯೆ ನನಗೆ ಬೇಕು.
ಉನ್ನತವಾದ ಸತ್ಯವನ್ನು ಕಂಡುಕೊಳ್ಳುವ ಜ್ಞಾನ ನನಗೆ ಬೇಕು ".

ರಾಮಕುಮಾರ ಇದಕ್ಕೇನು ಹೇಳಿಯಾನು ? ತಮ್ಮನನ್ನು ಅವನ ಪಾಡಿಗೆ
ಬಿಟ್ಟುಬಿಟ್ಟ.

ಮುಂದೆ ಗದಾಧರ ಕಲ್ಕತ್ತದಲ್ಲಿ ರಾಮಕೃಷ್ಣರೆಂದೇ ಹೆಸರಾದದ್ದು. ಈ
ಹೆಸರು ಯಾವಾಗ ಬಂದಿತೋ, ಹೇಗೆ ಬಂದಿತೋ ಗೊತ್ತಿಲ್ಲ. ಬಹುಶಃ ಅವರ
ಗುರುಗಳಲ್ಲಿ ಯಾರಾದರೊಬ್ಬರು ಈ ಹೆಸರನ್ನು ಕೊಟ್ಟಿರಬಹುದು.

ಹೀಗೆ ಎರಡು ವರ್ಷ ಕಳೆಯಿತು. ಈ ವೇಳೆಗೆ ಕಲ್ಕತ್ತದ ಶ್ರೀಮಂತ
ಮಹಿಳೆ ರಾಣಿ ರಾಸಮಣಿ ಎಂಬವಳು ದಕ್ಷಿಣೇಶ್ವರ ಎಂಬಲ್ಲಿ ಕಾಳೀ ದೇವಾಲಯವನ್ನು
ಕಟ್ಟಿಸಿದಳು. ಈ ದಕ್ಷಿಣೇಶ್ವರ ಕಲ್ಕತ್ತದ ಉತ್ತರಕ್ಕೆ ನಾಲ್ಕು ಮೈಲಿ ದೂರದಲ್ಲಿ,
ಗಂಗಾನದಿಯ ಪೂರ್ವದ ದಡದಲ್ಲಿದೆ.

ಕಾಳೀ ದೇವಾಲಯ ತುಂಬ ಭವ್ಯವಾಗಿತ್ತು. ಅಲ್ಲಿ ರಾಧಾಕಾಂತ
ದೇವಾಲಯ ಮತ್ತು ಶಿವದೇವಾಲಯಗಳೂ ಇದ್ದುವು. ವಿಶಾಲವಾದ ಅಂಗಳ, ನದಿಗೆ
ಹೋಗಲು ಮೆಟ್ಟಿಲುಗಳು. ಆದರೆ ರಾಣಿ ರಾಸಮಣಿಗೆ ಈ ದೇವಾಲಯಕ್ಕೆ
ಅರ್ಚಕರನ್ನು ದೊರಕಿಸಿಕೊಳ್ಳುವುದು ಕಷ್ಟವಾಗಿತ್ತು. ಕೊನೆಗೆ ರಾಮಕುಮಾರ

ಅರ್ಚಕನಾಗಲು ಒಪ್ಪಿಕೊಂಡ. ಆಗ ಯುವಕ ರಾಮಕೃಷ್ಣರೂ ಅಣ್ಣನೊಂದಿಗೆ ದಕ್ಷಿಣೇಶ್ವರಕ್ಕೆ ಬಂದರು.

ಬಂದ ಹೊಸತರಲ್ಲಿ ರಾಮಕೃಷ್ಣರು ದೇವಾಲಯದ ಸುತ್ತಮುತ್ತ ಓಡಾಡಿಕೊಂಡಿದ್ದರು. ಕೆಲವೊಮ್ಮೆ ಕಾಳೀ ದೇವಾಲಯದಲ್ಲಿ ಹಾಡುಗಳನ್ನು ಹಾಡುತ್ತಿದ್ದರು. ಈ ದೇವಾಲಯದ ಮೇಲ್ವಿಚಾರಣೆ ನೋಡಿಕೊಳ್ಳುತ್ತಿದ್ದವನು ಮಧುರಾನಾಥ ಬಿಶ್ವಾಸ. ಈತ ರಾಸಮಣಿಯ ಅಳಿಯ. ಇವನು ರಾಮಕೃಷ್ಣರನ್ನು ನೋಡಿದ. ಅವನಿಗೇ ಗೊತ್ತಿಲ್ಲದಂತೆ ಅವರಲ್ಲಿ ವಿಶ್ವಾಸ ಮೂಡಿತು. ಅವನು ರಾಮಕೃಷ್ಣರನ್ನೂ ಅರ್ಚಕರನ್ನಾಗಿ ಮಾಡಿಕೊಳ್ಳಲು ಇಷ್ಟಪಟ್ಟ. ಆದರೆ ಇದು ರಾಮಕೃಷ್ಣರಿಗೆ ಇಷ್ಟವಾಗಲಿಲ್ಲ. ಅವರ ಪ್ರಕಾರ ಈ ಕೆಲಸವೂ ಒಂದು ಬಂಧನವೇ ಆಗಿತ್ತು. ಅವರು ಮಧುರನ ಕಣ್ಣಿಗೆ ಕಾಣಿಸಿಕೊಳ್ಳುವುದನ್ನೇ ಕಡಿಮೆ ಮಾಡಿದರು.

ಈ ಮಧ್ಯೆ ರಾಮಕೃಷ್ಣರ ಸೋದರಳಿಯ ಹೃದಯರಾಮ ಎಂಬವನು ದಕ್ಷಿಣೇಶ್ವರಕ್ಕೆ ಬಂದ. ಅವನು ರಾಮಕೃಷ್ಣರನ್ನು "ಮಧುರ ತುಂಬ ಒಳ್ಳೆಯವನು. ನೀವೇಕೆ ಅವನ ಕಣ್ಣುತಪ್ಪಿಸಿ ತಿರುಗಾಡುವುದು?" ಎಂದು ಕೇಳಿದ. ಅದಕ್ಕೆ ರಾಮಕೃಷ್ಣರು, "ಅವನು ನನ್ನನ್ನು ಅರ್ಚಕನ ಕೆಲಸಕ್ಕೆ ನೇಮಿಸುತ್ತಾನೆಂದು ನನಗೆ ಹೆದರಿಕೆ. ನನ್ನಿಂದ ಅದೆಲ್ಲ ಸಾಧ್ಯವಿಲ್ಲ. ಅಲ್ಲದೆ ದೇವಿಯ ಒಡವೆಗಳನ್ನೆಲ್ಲ ನೋಡಿಕೊಳ್ಳುವವರು ಯಾರು ? ಅದಕ್ಕೇ ನನಗೆ ಭಯ" ಎಂದರು.

ಆಗ ಹೃದಯರಾಮ ದೇವಿಯ ಒಡವೆಗಳನ್ನು ನೋಡಿಕೊಳ್ಳಲು ಒಪ್ಪಿಕೊಂಡ. ರಾಮಕೃಷ್ಣರು ಅರ್ಚಕರಾಗಲು ಒಪ್ಪಿಕೊಂಡರು. ಮಧುರನಿಗೂ ಇದು ಒಪ್ಪಿಗೆಯಾಯಿತು. ಹೀಗೆ ರಾಮಕೃಷ್ಣರು ಕಾಳಿಯ ಅರ್ಚಕರಾದರು.

ಇಲ್ಲಿಂದ ರಾಮಕೃಷ್ಣರ ಜೀವನದ ಇನ್ನೊಂದು ಮುಖ್ಯವಾದ ಘಟ್ಟ ಮೊದಲಾಯಿತು. ಅವರ ಪಾಲಿಗೆ ದೇವಿಯ ಪೂಜೆಯೆಂಬುದು ಕೇವಲ ಒಂದು

ಉದ್ಯೋಗವಾಗಿರಲಿಲ್ಲ. ಪೂಜೆಗೆ ತೊಡಗಿದರೆಂದರೆ ಸುತ್ತಲಿನ ಜಗತ್ತಿನ ಪರಿವೆಯೇ ಇರುತ್ತಿರಲಿಲ್ಲ.

ಇಷ್ಟಾದರೂ ಅವರ ಮನಸ್ಸು ಕೇವಲ ಈ ಬಗೆಯ ಪೂಜೆಯಿಂದ ಸಮಾಧಾನಗೊಳ್ಳಲಿಲ್ಲ. ತಾವು ಪೂಜಿಸುವ ಜಗನ್ಮಾತೆಯನ್ನು ಕಣ್ಣಾರೆ ಕಾಣುವ ಹಂಬಲವಾಯಿತು. ಅವರಿಗೆ ಈ ಹಂಬಲ ದಿನದಿನಕ್ಕೆ ಹೆಚ್ಚಾಗುತ್ತಲೇ ಹೋಯಿತು. ಸಂಜೆ ಆರತಿಯ ಸಮಯದಲ್ಲಿ ದೇವಾಲಯವೆಲ್ಲ ಗಂಟೆ ಜಾಗಟೆಗಳ ಸದ್ದಿನಿಂದ ತುಂಬಿಹೋಗುತ್ತಿತ್ತು. ಅದನ್ನು ಕೇಳಿ ರಾಮಕೃಷ್ಣರು, "ಅಯ್ಯೋ, ಇನ್ನೊಂದು ದಿನ ಕಳೆಯಿತು. ಆದರೂ ನನಗೆ ತಾಯಿಯ ದರ್ಶನ ಆಗಲಿಲ್ಲವಲ್ಲ!" ಎಂದು ಕಣ್ಣೀರು ಸುರಿಸುತ್ತಿದ್ದರು. "ತಾಯಿ ನೀನೇಕೆ ನನ್ನಿಂದ ಮರೆಯಾಗಿರುವೆ?" ಎಂದು ಗೋಳಾಡುತ್ತಿದ್ದರು. ಗಂಗೆಯ ದಡದಲ್ಲಿ ಹೊರಳುತ್ತ, "ತಾಯಿ, ನನಗೆ ಕೇವಲ ನೀನು ಮಾತ್ರ ಬೇಕು. ದಯಮಾಡಿ ದರ್ಶನ ಕೊಡು. ಕಠಿಣಳಾಗಬೇಡ" ಎಂದು ಮೊರೆಯಿಡುತ್ತಿದ್ದರು. ಮುಖ ನೆಲಕ್ಕೆ ಉಜ್ಜಿ ರಕ್ತ ಸುರಿಯುತ್ತಿತ್ತು. ಅವರನ್ನು ನೋಡಿದ ಜನ, "ಪಾಪ, ಈತ ತನ್ನ ತಾಯಿಯನ್ನು ಕಳೆದುಕೊಂಡಿರಬೇಕು" ಎಂದುಕೊಳ್ಳುತ್ತಿದ್ದರು.

ರಾತ್ರಿ ಎಲ್ಲರೂ ಮಲಗಿರುವಾಗ ರಾಮಕೃಷ್ಣರು ಎದ್ದು ಹತ್ತಿರದ ಕಾಡಿಗೆ ಹೋಗುತ್ತಿದ್ದರು. ಅಲ್ಲಿ ಕುಳಿತು ಧ್ಯಾನ ಮಾಡುತ್ತಿದ್ದರು. ಒಮ್ಮೆ ಹೃದಯರಾಮ ಅವರನ್ನು "ನೀವು ಪ್ರತಿ ರಾತ್ರಿಯೂ ಎಲ್ಲಿಗೆ ಹೋಗುತ್ತೀರಿ?" ಎಂದು ಕೇಳಿದ. ಅದಕ್ಕೆ ಅವರು ನೇರವಾದ ಉತ್ತರ ಕೊಡಲಿಲ್ಲ. ಆದ್ದರಿಂದ ಒಂದು ರಾತ್ರಿ ಹೃದಯ ಅವರನ್ನು ರಹಸ್ಯವಾಗಿ ಹಿಂಬಾಲಿಸಿದ. ಅವರು ದಟ್ಟವಾದ ಕಾಡಿನೊಳಕ್ಕೆ ಹೋಗುವುದನ್ನು ನೋಡಿದ. ಕತ್ತಲಲ್ಲಿ ಮುಂದಕ್ಕೆ ಹೋಗಲು ಅವನಿಗೆ



ಬಟ್ಟೆ ಜನಿವಾರ ಬಿಚ್ಚಿಟ್ಟು ಧ್ಯಾನ ಮಾಡುತ್ತಿರುವ ರಾಮಕೃಷ್ಣರು

ಹೆದರಿಕೆಯಾಯಿತು. ದೂರದಿಂದ ಕಲ್ಲುಗಳನ್ನು ಎಸೆದ. ಆದರೆ ರಾಮಕೃಷ್ಣರು ಅದನ್ನು ಗಮನಿಸಲಿಲ್ಲ.

ಒಮ್ಮೆ ಮಾತ್ರ ಹೃದಯರಾಮ ಧೈರ್ಯ ತಂದುಕೊಂಡು ಕಾಡಿನೊಳಕ್ಕೆ ಹೋದ. ಹೋಗಿ ನೋಡಿದರೆ, ರಾಮಕೃಷ್ಣರು ತಮ್ಮ ಬಟ್ಟೆ ಜನಿವಾರಗಳನ್ನು ಪಕ್ಕಕ್ಕೆ ತೆಗೆದಿಟ್ಟು ಧ್ಯಾನ ಮಾಡುತ್ತಿದ್ದರು. "ಮಾವ, ಏನಿದು ? ನಿನಗೇನು ಹುಚ್ಚು ಹಿಡಿಯಿತೇ ?" ಎಂದು ಹೃದಯ ಕೂಗಿಕೊಂಡ. ಆದರೆ ರಾಮಕೃಷ್ಣರಿಗೆ ಅವನ ಮಾತು ಕೇಳಿಸಲಿಲ್ಲ. ಅವರು ವಿಗ್ರಹದಂತೆ ಕುಳಿತುಬಿಟ್ಟಿದ್ದರು. ಆಮೇಲೆ ಅವರು ಧ್ಯಾನದಿಂದ ಎದ್ದಾಗ ಅವರನ್ನು ಮತ್ತೆ ಕೇಳಿದ. ಅದಕ್ಕೆ ಅವರೆಂದರು " ನೋಡು, ನಮ್ಮನ್ನು ನಾವು

ಅನೇಕ ಹಗ್ಗಗಳಿಂದ ಕಟ್ಟಿಹಾಕಿಕೊಂಡಿರುತ್ತೇವೆ. ದ್ವೇಷ, ಅಸೂಯೆ, ಹೆಸರಿನ ಹಂಬಲ, ಭಯ, ಜಾತಿಯ ಹೆಮ್ಮೆ ಮೊದಲಾದುವೇ ಆ ಬಂಧಗಳು. ತಾಯಿಯ ಧ್ಯಾನ ಮಾಡುವಾಗ ನಾವು ಇವನ್ನೆಲ್ಲ ಬಿಟ್ಟುಬಿಡಬೇಕು. ಇದೇ ಕಾರಣಕ್ಕಾಗಿ ಇನ್ನೊಮ್ಮೆ ತಮ್ಮ ಉದ್ದವಾದ ತಲೆಗೂದಲಿಂದ ಒಬ್ಬ ಹರಿಜನನ ಮನೆಯ ಪಾಯಖಾನೆಯನ್ನು ಶುಚಿಗೊಳಿಸಿದ್ದೂ ಉಂಟು !

ಅಂತೂ ರಾಮಕೃಷ್ಣರು ಜಗನ್ಮಾತೆಯ ದರ್ಶನಕ್ಕಾಗಿ ಹುಚ್ಚರಾಗಿಬಿಟ್ಟರು. ಅವರಿಗೆ ನಿದ್ರೆ, ಊಟ, ಬಟ್ಟೆ ಯಾವುದರ ಯೋಚನೆಯೂ ಇರಲಿಲ್ಲ. ಅಷ್ಟೇ ಅಲ್ಲ, ಅವರಿಗೆ ಸರಿಯಾಗಿ ಪೂಜೆಯನ್ನು ಕೂಡ ಮಾಡಲು ಆಗುತ್ತಿರಲಿಲ್ಲ. ದೇವಿಯ ಮುಂದೆ ಅವರು ಕಲ್ಲಿನಂತೆ ಕುಳಿತಿರುತ್ತಿದ್ದರು. ಆಕೆಗೆ ಅರ್ಪಿಸಬೇಕಾದ ಹೂವನ್ನು ತಮ್ಮ ಮೇಲೆಯೇ ಇಟ್ಟುಕೊಂಡು ಕುಳಿತುಬಿಡುತ್ತಿದ್ದರು.

ಕೊನೆಗೊಂದು ದಿನ ಅವರಿಗೆ ದೇವಿಯ ಅಗಲಿಕೆಯನ್ನು ಇನ್ನು ಸಹಿಸಲು ಸಾಧ್ಯವಿಲ್ಲ ಎನ್ನಿಸಿತು. ತಾಯಿಯ ದರ್ಶನವಿಲ್ಲದೆ ಬದುಕಿರುವುದಕ್ಕಿಂತ ಸಾಯುವುದೇ ಮೇಲೆಂದು ತೋರಿತು. ಈ ಯೋಚನೆ ಬಂದದ್ದೇ ತಡ, ಗೋಡೆಯಲ್ಲಿ ತೂಗುಹಾಕಿದ್ದ ಕಾಳಿಯ ಖಡ್ಗದ ಕಡೆಗೆ ನುಗ್ಗಿದರು.

ಆಗ ನಡೆಯಿತು ಅದ್ಭುತ ! ಅವರು ಎಚ್ಚರತಪ್ಪಿ ಬಿದ್ದುಬಿಟ್ಟರು. ಸುತ್ತಲಿನ ಕಟ್ಟಡ, ದೇವಾಲಯ ಎಲ್ಲವೂ ಮಾಯವಾಗುತ್ತಿರುವಂತೆ ತೋರಿತು. ಅಲೆಅಲೆಯಾಗಿ ಬೆಳಕು ಅವರೆಡೆಗೆ ಉಕ್ಕಿ ಬಂದಿತು. ಅವರು ಅದರಲ್ಲಿ ಮುಳುಗಿಬಿಟ್ಟರು. ಆ ಅಲೆಗಳ ಮಧ್ಯದಲ್ಲಿ ಅವರ ಆನಂದಮಯಿ ಜಗನ್ಮಾತೆ ಅವರಿಗೆ ಕಾಣಿಸಿಕೊಂಡಳು.

ಈಗ ರಾಮಕೃಷ್ಣರ ಪೂಜೆ ಇನ್ನೂ ವಿಚಿತ್ರವಾಯಿತು. ಅವರು ಸದಾ

ತಾಯಿಯೊಂದಿಗೆ ಮಾತನಾಡುತ್ತಿದ್ದರು, ನಗುತ್ತಿದ್ದರು, ಅವಳಿಗೆ ಊಟ ಮಾಡಿಸುತ್ತಿದ್ದರು. ಜನ ಅವರನ್ನು ಹುಚ್ಚರೆಂದುಕೊಂಡರೂ ಅವರು ಅದನ್ನು ಲೆಕ್ಕಿಸಲಿಲ್ಲ. ಸದಾ ತನ್ನ ತಾಯಿಗೆ ಅಂಟಿಕೊಂಡಿರುವ ಮಗುವಿನಂತಾಗಿಬಿಟ್ಟರು ಅವರು.

ಭಕ್ತಿಯಲ್ಲಿ ಈ ಬಗೆಯ ವ್ಯಾಕುಲತೆ ತುಂಬ ಮುಖ್ಯವೆಂದು ರಾಮಕೃಷ್ಣರು ಹೇಳುತ್ತಿದ್ದರು. ಬೇರೆಲ್ಲ ಆಚರಣೆಗಳಿಗಿಂತ ಇದು ಹೆಚ್ಚು ಅಗತ್ಯ ಎಂಬುದು ಅವರ ಅಭಿಪ್ರಾಯ. ತಮ್ಮ ಸ್ಥಿತಿಯನ್ನು ವಿವರಿಸುತ್ತ ಅವರು ಹೇಳುತ್ತಾರೆ: "ಒಂದು ಕೋಣೆಯಲ್ಲಿ ಒಬ್ಬ ಕಳ್ಳ ಮಲಗಿರುವನೆಂದು ಭಾವಿಸಿ. ಅವನ ಪಕ್ಕದ ಕೋಣೆಯಲ್ಲಿ ಒಂದು ಚೀಲದ ತುಂಬ ಚಿನ್ನ ಇದೆ. ಆಗ ಆ ಕಳ್ಳ ನಿದ್ರಿಸಬಲ್ಲನೇ? ಅವನ ಮನಸ್ಸನ್ನೆಲ್ಲ ಚಿನ್ನವೇ ಆವರಿಸಿರುವುದಲ್ಲವೇ ? ತಾಯಿಗಾಗಿ ಹಂಬಲಿಸುವಾಗ ನನ್ನ ಸ್ಥಿತಿಯೂ ಹಾಗೇ ಆಗಿತ್ತು".

ಈ ಮಧ್ಯೆ ದಕ್ಷಿಣೇಶ್ವರದಲ್ಲೊಂದು ಸ್ವಾರಸ್ಯ ನಡೆಯಿತು. ಅಲ್ಲಿ ಕಾಳೀ ದೇವಾಲಯದ ಬಳಿಯೇ ರಾಧಾಕಾಂತ ದೇವಾಲಯವೂ ಇತ್ತು. ಒಮ್ಮೆ ಆ ದೇವಾಲಯದ ಅರ್ಚಕ ಪೂಜೆ ಮುಗಿಸಿ, ರಾಧಾಕಾಂತನ ವಿಗ್ರಹವನ್ನು ಪಕ್ಕದ ಕೋಣೆಗೆ ಮಲಗಿಸಲು ತೆಗೆದುಕೊಂಡು ಹೋಗುತ್ತಿದ್ದ. ಆಗ ಕಾಲುಜಾರಿ ಬಿದ್ದುಬಿಟ್ಟ. ಆ ವಿಗ್ರಹದ ಕಾಲು ಮುರಿದುಹೋಯಿತು.

ಸಂಪ್ರದಾಯದ ಪ್ರಕಾರ, ಮುರಿದ ವಿಗ್ರಹ ಪೂಜೆಗೆ ಬರುವುದಿಲ್ಲ. ರಾಸಮಣಿಗೆ ಏನು ಮಾಡಬೇಕೋ ತಿಳಿಯಲಿಲ್ಲ. ಅವಳು ದೊಡ್ಡ ದೊಡ್ಡ ಪಂಡಿತರ ಸಭೆ ಕರೆದಳು. ಅವರ ಸಲಹೆ ಕೇಳಿದಳು. ಅವರದೆಲ್ಲ ಒಂದೇ ಉತ್ತರ. " ಇಲ್ಲ, ಇಲ್ಲ, ಮುರಿದ ವಿಗ್ರಹವನ್ನು ಪೂಜಿಸಕೂಡದು. ಅದು ಸಾಧ್ಯವೇ ಇಲ್ಲ. ಈ ವಿಗ್ರಹವನ್ನು ಗಂಗೆಗೆ ಎಸೆದು ಹೊಸ ವಿಗ್ರಹ ತೆಗೆದುಕೊಂಡು ಬನ್ನಿ "

ಆದರೆ ರಾಣಿಗೆ ಹಳೆಯ ವಿಗ್ರಹ ತುಂಬ ಪ್ರಿಯವಾಗಿತ್ತು. ಅದನ್ನು ನದಿಗೆ ಎಸೆಯಲು ಅವಳಿಗೆ ಇಷ್ಟವಿರಲಿಲ್ಲ. ಈಗೇನು ಮಾಡುವುದು?"ರಾಮಕೃಷ್ಣರನ್ನು ಕೇಳಿನೋಡೋಣ. ಅವರು ಸರಳರು, ವಿವೇಕಿಗಳು" ಎಂದು ಅವಳು ಯೋಚಿಸಿದಳು.

ಈ ಸಮಸ್ಯೆಗೆ ರಾಮಕೃಷ್ಣರ ಪರಿಹಾರವೇ ಬೇರೆಯದಾಗಿತ್ತು. ಅವರೆಂದರು "ಏನು? ವಿಗ್ರಹವನ್ನು ನದಿಗೆ ಹಾಕುವುದೇ ? ಎಂತಹ ಮೂರ್ಖತನ ! ರಾಣಿಯ ಅಳಿಯನಿಗೆ ಕಾಲುಮುರಿದರೆ ಅವನನ್ನು ಹೊರಹಾಕಿ ಬೇರೆಯವನನ್ನು ತರುತ್ತಾರೋ ಅಥವಾ ಅವನಿಗೆ ಚಿಕಿತ್ಸೆ ಮಾಡಿಸುತ್ತಾರೋ?"

ಈ ಮಾತಿನಲ್ಲಿ ಸಮಸ್ಯೆಗೆ ಪರಿಹಾರ ಸ್ಪಷ್ಟವಾಗಿತ್ತು. ರಾಣಿಗೆ ತುಂಬ ಸಂತೋಷವಾಯಿತು. ಆದರೆ ವಿಗ್ರಹದ ಕಾಲನ್ನು ಸರಿಪಡಿಸುವವರು ಯಾರು ? ರಾಮಕೃಷ್ಣರಿಗೆ ಚೆನ್ನಾಗಿ ವಿಗ್ರಹಗಳನ್ನು ಮಾಡಲು ಬರುತ್ತದೆ ಎಂದು ರಾಣಿಗೆ ತಿಳಿದಿತ್ತು. ಆದ್ದರಿಂದ ಅವರನ್ನೇ ಕೇಳಿಕೊಂಡಳು. ಅವರು ವಿಗ್ರಹವನ್ನು ಎಷ್ಟು ಚೆನ್ನಾಗಿ ಸರಿಪಡಿಸಿದರೆಂದರೆ, ಅದೆಲ್ಲಿ ಮುರಿದಿತ್ತು ಎಂಬುದೇ ತಿಳಿಯುವಂತಿರಲಿಲ್ಲ. ಆ ವಿಗ್ರಹವನ್ನು ಇಂದಿಗೂ ದಕ್ಷಿಣೇಶ್ವರದಲ್ಲಿ ನೋಡಬಹುದು.

ಸಾಮಾನ್ಯವಾಗಿ ಭಕ್ತರ, ಸಂತರ ಜೀವನಗಳಲ್ಲಿ ಇಷ್ಟದೈವದ ನಿಷ್ಠೆಯನ್ನು ನಾವು ಹೆಚ್ಚಾಗಿ ಕಾಣುತ್ತೇವೆ. ಅವರು ತಮ್ಮ ಇಷ್ಟದೈವಕ್ಕಾಗಿ ಜೀವನವನ್ನೇ ಸಮರ್ಪಿಸುತ್ತಾರೆ. ಅದಕ್ಕಾಗಿ ಏನನ್ನು ಮಾಡಲೂ ಸಿದ್ಧರಾಗಿರುತ್ತಾರೆ.

ರಾಮಕೃಷ್ಣರು ಜಗನ್ಮಾತೆಯಲ್ಲಿ ಇಟ್ಟಿದ್ದ ನಿಷ್ಠೆಯೂ ಈ ಬಗೆಯದೇ. ಆದರೆ ಕೇವಲ ಇಷ್ಟೇ ಆಗಿದ್ದರೆ, ಅವರ ಜೀವನ ಬೇರಾವುದೇ ಸಂತರಿಗಿಂತ ಬೇರೆಯಾಗುತ್ತಿರಲಿಲ್ಲ. ಹಲವಾರು ಮತಪಂಥಗಳ ಸಾಧನಾ ವಿಧಾನಗಳ ಬಗೆಗೆ ಅವರಲ್ಲಿ ಕುತೂಹಲ ಮೂಡಿತು. ಅವುಗಳ ಮೂಲಕವೂ ಸಾಧನೆಯನ್ನು ಮಾಡಲು


ಅವರು ಆಲೋಚಿಸಿದರು. ಇದಕ್ಕೆ ತಕ್ಕಂತೆ ಅವರಿಗೆ ಈ ಬಗೆಯ ಅವಕಾಶಗಳೂ ದೊರೆಯುತ್ತ ಬಂದವು.

ರಾಮಕೃಷ್ಣರು ಹೇಳುತ್ತಾರೆ "ಕಾಳೀ ದೇವಾಲಯದ ವಾದ್ಯಕುಟೀರದಲ್ಲಿ ಪ್ರತಿದಿನ ಶಹನಾಯ್ ನುಡಿಸುತ್ತಾರೆ. ಅವರಲ್ಲಿ ಶ್ರುತಿ ಹಿಡಿಯುವವನು ಉದ್ದಕ್ಕೂ 'ಪೊಂಯ್' ಎಂದು ಒಂದೇ ಸ್ವರವನ್ನೇ ಊದುತ್ತಿರುತ್ತಾನೆ. ಆದರೆ ಇನ್ನೊಬ್ಬ ಮಾತ್ರ ಹಲವಾರು ರಾಗಗಳನ್ನು ನುಡಿಸುತ್ತಿರುತ್ತಾನೆ. ಧರ್ಮದ ವಿಚಾರದಲ್ಲಿ ನಾನು ಈ ಎರಡನೆಯವನ ಹಾಗೆ. ನಾನು ಹಲವಾರು ವಿಧಗಳಲ್ಲಿ ದೇವರನ್ನು ಪ್ರೀತಿಸುತ್ತೇನೆ. ನನಗೆ ಎಲ್ಲ ದಾರಿಗಳೂ ಬೇಕು. ನಾನೇಕೆ ಯಾವಾಗಲೂ ಒಂದೇ ಸ್ವರ ಊದುವವನಾಗಲಿ ?"

ರಾಮಕೃಷ್ಣರ ಈ ನಿಲುವು ಅವರ ಬದುಕಿಗೆ ಬಗೆಬಗೆಯ ಬಣ್ಣಗಳನ್ನು ತಂದುಕೊಟ್ಟಿತು. ಸಾಮರಸ್ಯ ಸಮನ್ವಯಗಳ ಪಾಠವನ್ನೂ ಜಗತ್ತಿನ ಮುಂದಿಟ್ಟಿತು. ಇದನ್ನೀಗ ಸಂಗ್ರಹವಾಗಿ ನೋಡೋಣ :

ಸಾವಿರದ ಎಂಟುನೂರಾ ಅರವತ್ತೊಂದುರಲ್ಲಿ ದಕ್ಷಿಣೇಶ್ವರಕ್ಕೆ ಮಧ್ಯವಯಸ್ಸಿನ ಸನ್ಯಾಸಿನಿಯೊಬ್ಬಳು ಬಂದಳು. ಅವಳ ಹೆಸರು ಭೈರವಿ. ಬ್ರಾಹ್ಮಣ ಮಹಿಳೆಯಾದ್ದರಿಂದ ಅವಳನ್ನು ಭೈರವಿ ಬ್ರಾಹ್ಮಣಿ ಎಂದು ಕರೆಯುತ್ತಿದ್ದರು. ಅವಳು ರಾಮಕೃಷ್ಣರನ್ನು ನೋಡಿದಾಗ 'ಮಗು ನಾನು ನಿನಗೋಸ್ಕರ ಎಷ್ಟೊಂದು ಹುಡುಕುತ್ತಿದೆ! ನಿನಗೆ ಸಾಧನೆ ಹೇಳಿಕೊಡಬೇಕೆಂದು ಜಗನ್ಮಾತೆ ತಾಯಿ ನನ್ನನ್ನು ಕಳಿಸಿದ್ದಾಳೆ " ಎಂದಳು. ಅವಳು ರಾಮಕೃಷ್ಣರನ್ನು ತನ್ನ ಮಗನಂತೆ ಪ್ರೀತಿಸುತ್ತಿದ್ದಳು.

ರಾಮಕೃಷ್ಣರು ಭೈರವಿಯನ್ನು ಗುರುವಾಗಿ ಸ್ವೀಕರಿಸಿ (ತಂತ್ರಶಾಸ್ತ್ರಗಳ ಪ್ರಕಾರ) ಸಾಧನೆಯನ್ನು ಮಾಡಿದರು. ತಾಂತ್ರಿಕ ಸಾಧನೆ ತುಂಬ ಕಷ್ಟಕರ. ಮನಸ್ಸು ಸ್ವಲ್ಪ ಚಂಚಲವಾದರೂ ದಾರಿ ತಪ್ಪುವ ಸಂಭವ. ರಾಮಕೃಷ್ಣರು ಇದನ್ನು



ಭೈರವಿಯನ್ನು ಗುರುವಾಗಿ ಸ್ವೀಕರಿಸಿದರು

ಯಶಸ್ವಿಯಾಗಿ ಪೂರೈಸಿದರು.

ಈ ವೇಳೆಗೆ ದಕ್ಷಿಣೇಶ್ವರಕ್ಕೆ ಜಟಾಧಾರಿ ಎಂಬ ಸನ್ಯಾಸಿಯೊಬ್ಬನು ಬಂದ. ಅವನು ಮುದುಕ. ಉದ್ದವಾದ ಜಡೆ ಬಿಟ್ಟಿದ್ದ. ಅವನ ಬಳಿ ಬಾಲರಾಮನ ಸುಂದರವಾದ ವಿಗ್ರಹವಿತ್ತು. ಅವನು ಅದನ್ನು 'ರಾಮಲಾಲ' ಎಂದು ಕರೆಯುತ್ತಿದ್ದ. ತುಂಬ ಪ್ರೀತಿಸುತ್ತಿದ್ದ. ಅವನಿಗೆ ರಾಮಲಾಲನ ದರ್ಶನವೂ ಆಗಿತ್ತು. ಅವನು ರಾಮಲಾಲನ ಆರೈಕೆ ಮಾಡುತ್ತಿದ್ದ. ಅವನ ಜೊತೆ ಆಟವಾಡುತ್ತಿದ್ದ ; ನಿದ್ರೆಯನ್ನೂ

ಮಾಡುತ್ತಿದ್ದ. ರಾಮಕೃಷ್ಣರು ಇದನ್ನೆಲ್ಲ ಕಂಡುಕೊಂಡರು. ಆ ರಾಮಲಾಲ ಬರಬರುತ್ತ ರಾಮಕೃಷ್ಣರನ್ನು ತುಂಬ ಹಚ್ಚಿಕೊಂಡ. ಕೊನೆಗೆ ಅವರನ್ನು ಬಿಟ್ಟು ಬರುವುದಕ್ಕೇ ನಿರಾಕರಿಸಿದ. ಆಗ ಜಟಾಧಾರಿ ಅವನನ್ನು ರಾಮಕೃಷ್ಣರ ಬಳಿಯೇ ಬಿಟ್ಟು ಹೊರಟುಹೋದ.

ದೇವರನ್ನು ಮಗುವೆಂದು ಭಾವಿಸಿ ಪೂಜಿಸುವುದನ್ನು 'ವಾತ್ಸಲ್ಯಭಾವ ಸಾಧನೆ' ಎನ್ನುತ್ತಾರೆ. ರಾಮಕೃಷ್ಣರು ರಾಮಲಾಲನ ಮೂಲಕ ಮಾಡಿದ್ದು ಈ ಬಗೆಯ ಸಾಧನೆಯನ್ನು.

ಬಳಿಕ ರಾಮಕೃಷ್ಣರು ಮಧುರಭಾವದ ಸಾಧನೆಯನ್ನು ಕೈಗೊಂಡರು. ಮಧುರಭಾವವೆಂದರೆ ಭಗವಂತನನ್ನು ಪತಿಯೆಂದು ಭಾವಿಸಿ ಪ್ರೀತಿಸುವುದು. ರಾಮಕೃಷ್ಣರು ಕೃಷ್ಣನ ಸಖಿಯಾದ ರಾಧೆಯ ಭಾವವನ್ನು ತಮ್ಮಲ್ಲಿ ತಂದುಕೊಂಡರು. ಹೆಂಗಸಿನಂತೆ ವೇಷಭೂಷಣಗಳನ್ನು ಧರಿಸಿ ಸಾಧನೆಯಲ್ಲಿ ತೊಡಗಿದರು. ಇದರ ಫಲವಾಗಿ ಅವರು ರಾಧಾಕೃಷ್ಣನ ದರ್ಶನವನ್ನೂ ಪಡೆದುಕೊಂಡರು.

ಈ ಸಾಧನೆ ಮುಗಿಯುತ್ತಿರುವಂತೆಯೇ ದಕ್ಷಿಣೇಶ್ವರಕ್ಕೆ ಸನ್ಯಾಸಿಯೊಬ್ಬ ಬಂದ. ಆತ ಬತ್ತಲಾಗಿದ್ದ. ಎತ್ತರದ ಮನುಷ್ಯ. ಅವನು ರಾಮಕೃಷ್ಣರನ್ನು ಕಂಡ ತಕ್ಷಣ, ಅವರೊಬ್ಬ ಮಹಾಪುರುಷರೆಂಬುದನ್ನು ಮನಗಂಡ. ವೇದಾಂತ ಸಾಧನೆ ಮಾಡಲು ಅವರು ತಕ್ಕ ವ್ಯಕ್ತಿಯೆಂದು ಕಂಡುಕೊಂಡ. ಇವನೇ ತೋತಾಪುರಿ ; ವೇದಾಂತ ಸಾಧನೆ ಮಾಡಿ, ನಿರಾಕಾರ ಭಗವಂತನ ಸಾಕ್ಷಾತ್ಕಾರ ಮಾಡಿಕೊಂಡಿದ್ದ.

ತೋತಾಪುರಿ ರಾಮಕೃಷ್ಣರಿಗೆ ಚಿಕ್ಕ ಗುಡಿಸಲೊಂದರಲ್ಲಿ ವೇದಾಂತ ಬೋಧನೆ ಪ್ರಾರಂಭಿಸಿದ. ಅವನು ಅವರಿಗೆ ಸನ್ಯಾಸವನ್ನು ನೀಡಿದ. ಬಳಿಕ ನಿರಾಕಾರದ ಮೇಲೆ ಧ್ಯಾನ ಮಾಡುವುದನ್ನು ಹೇಳಿಕೊಟ್ಟ. ಆದರೆ ರಾಮಕೃಷ್ಣರಿಗೆ ಅದು

ಸಾಧ್ಯವಾಗಲಿಲ್ಲ. ಅವರೆಷ್ಟು ಪ್ರಯತ್ನಿಸಿದರೂ, ಜಗನ್ಮಾತೆಯ ಆನಂದಮಯ ರೂಪ ಅವರ ಮುಂದೆ ಬಂದು ನಿಲ್ಲುತ್ತಿತ್ತು. ತೋತಾಪುರಿ ತಾಳ್ಮೆಗೆಟ್ಟು, " ಏನು ? ನಿರಾಕಾರ ಧ್ಯಾನ ನಿನಗೇಕೆ ಸಾಧ್ಯವಾಗುವುದಿಲ್ಲ !" ಎನ್ನುತ್ತ, ಗಾಜಿನ ಚೂರಿನಿಂದ ಅವರ ಹುಬ್ಬುಗಳ ಮಧ್ಯೆ ಚುಚ್ಚಿ, ಅಲ್ಲಿ ಮನಸ್ಸನ್ನು ನಿಲ್ಲಿಸುವಂತೆ ಹೇಳಿದ.

ತೋತಾಪುರಿ ಹೊರಗೆ ಬಂದು ಬಾಗಿಲು ಹಾಕಿಬಿಟ್ಟ. ರಾಮಕೃಷ್ಣರು ಕರೆದಾಗ ಬಾಗಿಲು ತೆರೆಯೋಣವೆಂದುಕೊಂಡಿದ್ದ. ಆದರೆ ಮೂರು ದಿನಗಳಾದರೂ ಅವರು ಕರೆಯದಿದ್ದಾಗ ತಾನೇ ಹೋಗಿ ಬಾಗಿಲು ತೆರೆದ. ನೋಡುತ್ತಾನೆ ರಾಮಕೃಷ್ಣರು ಸಮಾಧಿ ಸ್ಥಿತಿಯಲ್ಲಿ ಮುಳುಗಿಬಿಟ್ಟಿದ್ದಾರೆ ! ಹೊರಜಗತ್ತಿನ ಅರಿವೇ ಇಲ್ಲ ಅವರಿಗೆ. "ನಾನು ನಲವತ್ತು ವರ್ಷಗಳಲ್ಲಿ ಸಾಧಿಸಿದ್ದನ್ನು ಈತ ಮೂರೇ ದಿನಗಳಲ್ಲಿ ಸಾಧಿಸಿಬಿಟ್ಟನಲ್ಲ!" ಎಂದು ತೋತಾಪುರಿಗೆ ಆಶ್ಚರ್ಯವಾಯಿತು.

ಬಳಿಕ ಅವನು ರಾಮಕೃಷ್ಣರ ಕಿವಿಯಲ್ಲಿ ಹಲವಾರು ಸಲ 'ಹರಿಓಂ' ಎಂದು ಕೂಗಿದಾಗ ಅವರಿಗೆ ಪ್ರಜ್ಞೆ ಮರಳಿತು.

ತೋತಾಪುರಿ ಹೊರಟುಹೋದ ಮೇಲೆ ರಾಮಕೃಷ್ಣರು ಹೆಚ್ಚಾಗಿ ಜ್ಞಾನಭಾವದಲ್ಲೇ ಮುಳುಗಿದ್ದರು. ಆ ದಿನಗಳಲ್ಲಿ ಅವರ ಬಳಿಗೆ ಗೋವಿಂದರಾಯನೆಂಬ ಮುಸಲ್ಮಾನ ಫಕೀರನೊಬ್ಬ ಬಂದ. ಆತ ಸೂಫಿ ಮುಸಲ್ಮಾನ ಪಂಥಕ್ಕೆ ಸೇರಿದವನು.

ಅವನ ಶ್ರದ್ಧೆಯನ್ನು ರಾಮಕೃಷ್ಣರು ಮೆಚ್ಚಿಕೊಂಡರು. ಅವನಿಂದ ಇಸ್ಲಾಂ ಧರ್ಮದ ಮೂಲಕವೂ ಸಾಧನೆ ಮಾಡಬೇಕೆಂದು ಅನ್ನಿಸಿತು.

ರಾಮಕೃಷ್ಣರು ತಮ್ಮ ಮನಸ್ಸಿನಲ್ಲಿ ಏನಾದರೂ ಆಲೋಚನೆ ಬಂದರೆ ಅದನ್ನು ತಕ್ಷಣ ಮಾಡಿಬಿಡುತ್ತಿದ್ದರು. ಈಗ ಅವರು ಗೋವಿಂದರಾಯನಿಂದ ಇಸ್ಲಾಂ ದೀಕ್ಷೆಯನ್ನು ಕೈಗೊಂಡರು. ಕಾಳೀ ದೇವಾಲಯಕ್ಕೂ ಹೋಗಲಿಲ್ಲ. ಹಿಂದೂ

ದೇವತೆಗಳನ್ನು ಮರೆತೇಬಿಟ್ಟರೆನ್ನಬೇಕು. 'ಅಲ್ಲಾ'ನ ಜಪ ಮಾಡುತ್ತ, ನಮಾಜು ಮಾಡುತ್ತಿದ್ದರು. ಅವರ ಊಟ, ಬಟ್ಟೆ ಎಲ್ಲ ಮುಸಲ್ಮಾನರ ಹಾಗೆಯೇ.

ಇದಾದ ಏಳು ವರ್ಷಗಳ ಬಳಿಕ ಅವರು ಏಸುಕ್ರಿಸ್ತನ ದರ್ಶನವನ್ನೂ ಪಡೆದುಕೊಂಡರು.

ರಾಮಕೃಷ್ಣರಿಗೆ ಶಂಭುಚರಣ ಮಲ್ಲಿಕ ಎಂಬ ಭಕ್ತನಿದ್ದ. ಕಾಳೀ ದೇವಾಲಯದ ಹತ್ತಿರವೇ ಅವನ ಮನೆ ಇತ್ತು.

ರಾಮಕೃಷ್ಣರು ಆಗಾಗ ಅವನ ಮನೆಗೆ ಹೋಗುತ್ತಿದ್ದರು. ಕೆಲವೊಮ್ಮೆ ಶಂಭುಮಲ್ಲಿಕ ಅವರಿಗೆ ಬೈಬಲ್ ಓದಿಹೇಳುತ್ತಿದ್ದ. ಇದರಿಂದ ರಾಮಕೃಷ್ಣರಿಗೆ ಕ್ರಿಸ್ತನ ದರ್ಶನ ಮಾಡಬೇಕೆಂಬ ಅಪೇಕ್ಷೆಯಾಯಿತು. ಇದೂ ಒಂದು ವಿಚಿತ್ರ ರೀತಿಯಲ್ಲಿ ನೆರವೇರಿತು.

ಒಂದು ದಿನ ಅವರು ಯದುಮಲ್ಲಿಕನೆಂಬ ಇನ್ನೊಬ್ಬ ಭಕ್ತನ ಮನೆಯ ಪಡಸಾಲೆಯಲ್ಲಿ ಕುಳಿತಿದ್ದರು. ಅಲ್ಲಿ ಗೋಡೆಯ ಮೇಲೆ, ಬಾಲಕ್ರಿಸ್ತನನ್ನು ತಾಯಿ ಮೇರಿ ಎತ್ತಿಕೊಂಡಿದ್ದ ಚಿತ್ರವಿತ್ತು. ರಾಮಕೃಷ್ಣರು ಕ್ರಿಸ್ತನ ದಿವ್ಯ ಜೀವನವನ್ನು ನೆನೆಯುತ್ತ ಆ ಚಿತ್ರವನ್ನೇ ದಿಟ್ಟಿಸತೊಡಗಿದರು. ಇದ್ದಕ್ಕಿದ್ದಂತೆ ಅವರಿಗೆ ಆ ಚಿತ್ರ ಜೀವಂತವಾದಂತೆ ಕಂಡಿತು. ಮೇರಿ ಹಾಗೂ ಬಾಲ ಏಸುವಿನ ಕಡೆಯಿಂದ ಬೆಳಕಿನ ಕಿರಣಗಳು ಹೊರಟು ತಮ್ಮಲ್ಲಿ ಒಂದಾಗುತ್ತಿರುವಂತೆ ತೋರಿತು. ಕ್ರಿಸ್ತನಲ್ಲಿ ಮನಸ್ಸು ಲೀನವಾದ ಆ ಗಳಿಗೆಯಿಂದ ಅವರ ಸ್ಥಿತಿಯೇ ಬೇರೆಯಾಯಿತು.

ಮೂರು ದಿನ ಅವರು ಅದೇ ಸ್ಥಿತಿಯಲ್ಲಿದ್ದರು. ಕಾಳೀ ದೇವಾಲಯಕ್ಕೂ ಹೋಗಲಿಲ್ಲ. ನಾಲ್ಕನೆಯ ದಿನ ಅವರು ಪಂಚವಟಿಯ ಹತ್ತಿರ ನಡೆದಾಡುತ್ತಿದ್ದಾಗ , ಶಾಂತಮುಖದ ವ್ಯಕ್ತಿಯೊಬ್ಬ ತಮ್ಮ ಕಡೆಗೇ ಬರುತ್ತಿರುವುದನ್ನು ಕಂಡರು. ಈತ

ಯಾರಿರಬಹುದು ಎಂದುಕೊಳ್ಳುವಷ್ಟರಲ್ಲೇ "ಈತನೇ ಏಸು ಕ್ರಿಸ್ತ ; ಮಾನವ ಕೋಟಿಗಾಗಿ ತನ್ನೆದೆಯ ರಕ್ತವನ್ನೇ ಧಾರೆಯೆರೆದವನು " ಎಂದು ಅವರ ಒಳದನಿ ನುಡಿಯಿತು. ಆಗ ಕ್ರಿಸ್ತನ ಆ ಪ್ರಕಾಶಮಾನ ರೂಪ ಅವರಲ್ಲಿ ಲೀನವಾಯಿತು.

ಹೀಗೆ ರಾಮಕೃಷ್ಣರು ಬೇರೆ ಬೇರೆ ಧರ್ಮಗಳ ಮೂಲಕ ದೇವರನ್ನು ಕಂಡರು. ಈ ಧರ್ಮಗಳೆಲ್ಲ ಒಂದೇ ಊರಿಗೆ ಹೋಗುವ ಬೇರೆ ಬೇರೆ ದಾರಿಗಳಿದ್ದಂತೆ; ಎಲ್ಲ ಧರ್ಮಗಳೂ ಸತ್ಯ ಎಂಬುದನ್ನು ತಮ್ಮ ಅನುಭವದಿಂದ ಕಂಡುಕೊಂಡರು.

ಲೋಕಸಾಮಾನ್ಯರು ಹೆಣ್ಣನ್ನು ಹೆಚ್ಚಾಗಿ ಭೋಗದ ವಸ್ತುವೆಂದು ಕಂಡರೆ, ತ್ಯಾಗಿಗಳಾದವರು ಆಕೆಯನ್ನು ತಮ್ಮ ಸಾಧನೆಗೆ ಅಡ್ಡಿಯೆಂದು ತಿರಸ್ಕರಿಸಿ ಬಿಡುವುದುಂಟು. ಈ ಎರಡು ಧೋರಣೆಗಳಿಗೂ ಉತ್ತರವನ್ನು ನೀಡುತ್ತಾರೆ ರಾಮಕೃಷ್ಣರು.

ಅವರು ಭೈರವಿಯನ್ನು ತಮ್ಮ ಗುರುವನ್ನಾಗಿ ಸ್ವೀಕರಿಸಿದ್ದನ್ನು ನಾವು ನೋಡಿದ್ದೇವೆ. ಅಂತೆಯೇ ಅವರು ಭಗವಂತನ ದರ್ಶನಕ್ಕಾಗಿ ಹಂಬಲಿಸಿದ ತ್ಯಾಗಿಯಾದರೂ ಮದುವೆಯಾದರು. ಮದುವೆಯಾದಾಗ ಅವರಿಗೆ ಇಪ್ಪತ್ತಮೂರು ವರ್ಷ. ಜಗನ್ಮಾತೆಯ ದರ್ಶನಕ್ಕಾಗಿ ಹಂಬಲಿಸುತ್ತಿದ್ದ ಆ ದಿನಗಳಲ್ಲಿ ಅವರಿಗೆ ಹುಚ್ಚು ಹಿಡಿದಿದೆ ಎಂದು ಜನ ತೀರ್ಮಾನಿಸಿದ್ದರಷ್ಟೆ ? ಈ ಹುಚ್ಚಿಗೆ ಪರಿಹಾರವೆಂದು ಅವರ ತಾಯಿ ಚಂದ್ರಮಣಿ ಮತ್ತು ಎರಡನೆಯ ಅಣ್ಣ ರಾಮೇಶ್ವರ ಅವರಿಗೆ ಮದುವೆ ಮಾಡಲು ತೀರ್ಮಾನಿಸಿದರು. ಇದಕ್ಕಾಗಿ ಅವರನ್ನು ಕಾಮಾರಪುಕುರಕ್ಕೆ ಕರೆಸಿಕೊಂಡರು. ಹೆಣ್ಣಿಗಾಗಿ ಹುಡುಕಾಟವೂ ನಡೆಯಿತು. ಆದರೆ ಹೆಣ್ಣು ಸುಲಭವಾಗಿ ಸಿಗಲಿಲ್ಲ. ಕೊನೆಗೆ ರಾಮಕೃಷ್ಣರೇ ಸಹಾಯಕ್ಕೆ ಬಂದರು. "ಸುಮ್ಮನೆ ಅಲ್ಲಿ ಇಲ್ಲಿ ಏಕೆ ಹುಡುಕುತ್ತೀರಿ? ಜಯರಾಂಬಾಟಿಗೆ ಹೋಗಿ. ಅಲ್ಲಿ ರಾಮಚಂದ್ರ ಮುಖರ್ಜಿಯ ಮನೆಯಲ್ಲಿ ನನಗಾಗಿ

ಮೀಸಲಾದ ಹುಡುಗಿ ಇದ್ದಾಳೆ" ಎಂದು ಸೂಚಿಸಿದರು. ಮನೆಯವರು ಅದರಂತೆ ಹುಡುಕಿದಾಗ ಹುಡುಗಿ ಸಿಕ್ಕಿದಳು. ಆಕೆಯ ಹೆಸರು ಶಾರದಾಮಣೀ ದೇವಿ.


ಮದುವೆಗೆ ವಿರೋಧಿಸಿಯಾನು ಎಂದುಕೊಂಡಿದ್ದ ಮಗನೇ ಹುಡುಗಿಯನ್ನೂ ಹುಡುಕಿಕೊಟ್ಟು ಮದುವೆಯಾದ. ಇದರಿಂದ ಚಂದ್ರಮಣಿಗೆ ಸಮಾಧಾನವಾಯಿತು. ಮದುವೆ ಮಾಡಿಕೊಂಡು ರಾಮಕೃಷ್ಣರು ದಕ್ಷಿಣೇಶ್ವರಕ್ಕೆ ಹಿಂದಿರುಗಿದರೆ, ಶಾರದೆ ತವರುಮನೆಗೆ ತೆರಳಿದಳು. ರಾಮಕೃಷ್ಣರನ್ನು ಮದುವೆಯಾದಾಗ ಶಾರದಾದೇವಿಯವರಿಗೆ ಇನ್ನೂ ಚಿಕ್ಕ ವಯಸ್ಸು. ಅವರಿಗೆ ಹದಿನಾಲ್ಕು ತುಂಬುವ ಹೊತ್ತಿಗೆ ರಾಮಕೃಷ್ಣರು ಮತ್ತೆ ಕಾಮಾರಪುಕುರಕ್ಕೆ ಬಂದರು. ತಮ್ಮ ಪತಿಯನ್ನು ಕಾಣಬೇಕು, ಅವರ ಬಳಿಯಿರಬೇಕು ಎಂದುಕೊಳ್ಳುತ್ತಿದ್ದ ಶಾರದಾದೇವಿಯವರೂ ಆಗ ಅಲ್ಲಿಗೆ ಬಂದರು. ತಮ್ಮ ಪತಿಯ ಪ್ರೀತಿ ಕರುಣೆಗಳಿಗೆ ಅವರು ಮಾರುಹೋದರು. ರಾಮಕೃಷ್ಣರು ತಮ್ಮ ಪತ್ನಿಗೆ, ದೇವರಲ್ಲಿ ಭಕ್ತಿ ಬೆಳೆಸಿಕೊಳ್ಳುವದು ಹೇಗೆ, ಪೂಜೆ ಮಾಡುವುದು ಹೇಗೆ, ಹಿರಿಯರ ಸೇವೆಯನ್ನು ಹೇಗೆ ಮಾಡಬೇಕು, ಇತರರೊಂದಿಗೆ ಹೇಗೆ ನಡೆದುಕೊಳ್ಳಬೇಕು, ಮನೆಗೆಲಸಗಳನ್ನು ಹೇಗೆ ಮಾಡಬೇಕು ಎಂಬುದನ್ನೆಲ್ಲ ತಿಳಿಸಿಕೊಟ್ಟರು. ಶಾರದಾದೇವಿಯವರೂ ಇವನ್ನೆಲ್ಲ ತುಂಬ ಶ್ರದ್ಧೆಯಿಂದ ಕಲಿತುಕೊಂಡರು. ತಮ್ಮ ಪತಿಯ ಪರಿಶುದ್ಧ ಪ್ರೀತಿಯನ್ನು ಕಂಡು ಅವರಿಗೆ ಬಹಳ ಆನಂದವಾಯಿತು.

ಇದಾದ ಸುಮಾರು ನಾಲ್ಕು ವರ್ಷಗಳ ಬಳಿಕ ಶಾರದಾದೇವಿಯವರು ಮೊದಲ ಬಾರಿ ದಕ್ಷಿಣೇಶ್ವರಕ್ಕೆ ಹೋಗಿ ತಮ್ಮ ಪತಿಯನ್ನು ಕಂಡರು. ಕೆಲವು ಜನ ರಾಮಕೃಷ್ಣರನ್ನು ಇನ್ನೂ ಹುಚ್ಚರೆನ್ನುತ್ತಿದ್ದುದು ಆಗಾಗ ಅವರ ಕಿವಿಗೆ ಬೀಳುತ್ತಿತ್ತು. ಅದು ನಿಜವಿರಲಾರದೆಂದು ಅವರಿಗೆ ತೋರಿದರೂ, "ಒಂದು ವೇಳೆ ಅವರಿಗೆ ನಿಜವಾಗಿಯೂ ಹಾಗಾಗಿದ್ದರೆ ನಾನು ಅವರ ಸೇವೆ ಮಾಡಬೇಡವೇ?" ಎಂದು ಯೋಚಿಸಿದರು.

ಅವರು ತಮ್ಮ ತಂದೆಯೊಂದಿಗೆ ಎಪ್ಪತ್ತು ಮೈಲಿ ಕಾಲ್ನಡಿಗೆಯಲ್ಲಿ ಪ್ರಯಾಣ ಮಾಡಿ ದಕ್ಷಿಣೇಶ್ವರಕ್ಕೆ ಬಂದರು. ದಾರಿಯಲ್ಲಿ ಅವರ ಆರೋಗ್ಯ ಬೇರೆ ಕೆಟ್ಟಿತು. ಆದರೆ ದಕ್ಷಿಣೇಶ್ವರಕ್ಕೆ ಬಂದು ಪತಿಯನ್ನು ಕಂಡಾಗ ಅವರಿಗೆ ತುಂಬ ಸಮಾಧಾನವಾಯಿತು. ರಾಮಕೃಷ್ಣರು ಪತ್ನಿಯನ್ನು ತುಂಬ ಅಕ್ಕರೆಯಿಂದ ಉಪಚರಿಸಿದರು.

ಶಾರದಾದೇವಿಯವರು ತಮ್ಮ ಪತಿಯ ಸ್ವಭಾವವನ್ನು ಅರಿತುಕೊಂಡರು. ಅದಕ್ಕಿಂತ ಹೆಚ್ಚಾಗಿ ಅವರ ಜೀವನದ ಆದರ್ಶವನ್ನು ಅರ್ಥ ಮಾಡಿಕೊಂಡರು. ಅದೇ ಆದರ್ಶವನ್ನೇ ತಮ್ಮ ಬದುಕಿನಲ್ಲೂ ಅಳವಡಿಸಿಕೊಂಡು 'ಧರ್ಮಪತ್ನಿ'ಯಾದರು.

ರಾಮಕೃಷ್ಣರು ಶಾರದಾದೇವಿಯವರನ್ನು ಎಷ್ಟರಮಟ್ಟಿಗೆ ಗೌರವಿಸಿದರೆಂದರೆ, ಒಂದು ಹುಣ್ಣಿಮೆಯಂದು ಅವರನ್ನು ಒಂದು ವಿಶೇಷ ಪೀಠದ ಮೇಲೆ ಕುಳ್ಳಿರಿಸಿ



ರಾಮಕೃಷ್ಣರಿಂದ ಶಾರದಾದೇವಿಗೆ ಪೂಜೆ

ಜಗನ್ಮಾತೆಗೆ ಮಾಡುವಂತೆಯೇ ಪೂಜೆ ಮಾಡಿದರು. ತಮ್ಮ ಸಾಧನೆಯ ಫಲವನ್ನೆಲ್ಲ ಅವರಿಗೆ ಅರ್ಪಿಸಿದರು. ಹೀಗೆ ಶಾರದಾದೇವಿಯವರು 'ಶ್ರೀಮಾತೆ'ಯಾದರು.

ರಾಮಕೃಷ್ಣರ ಜೀವನದ ಇನ್ನೊಂದು ಪ್ರಮುಖ ಅಧ್ಯಾಯವೆಂದರೆ ಶಿಷ್ಯನಿರ್ಮಾಣ. ತಮ್ಮ ಜೀವನ ದರ್ಶನವನ್ನು ಪ್ರಸಾರ ಮಾಡಲು ಯೋಗ್ಯರಾದ ಶಿಷ್ಯರಿಗಾಗಿ ಅವರು ಕಾತರಿಸುತ್ತಿದ್ದರು. ಹಿಂದೆ ದೇವಿಯ ದರ್ಶನಕ್ಕಾಗಿ ಹಂಬಲಿಸಿದಂತೆಯೇ ಶಿಷ್ಯರ ಆಗಮನಕ್ಕಾಗಿಯೂ ತಳಮಳಿಸಿದರು. ಸಂಜೆ ಕರಗಿ ರಾತ್ರಿಯಾಗುತ್ತಿದ್ದಾಗ, ತೋಟದಲ್ಲಿದ್ದ ಕಟ್ಟಡದ ತಾರಸಿಯ ಮೇಲಕ್ಕೆ ಹೋಗಿ ಜೋರಾಗಿ ಕೂಗಿ ಕರೆಯುತ್ತಿದ್ದರು. "ಓ ನನ್ನ ಹುಡುಗರೇ, ಎಲ್ಲಿದ್ದೀರಿ ? ಬನ್ನಿ, ನೀವಿಲ್ಲದೆ ನಾನು ಬದುಕಲಾರೆ !"

ಅವರ ಈ ಹೃದಯದಾಳದ ಕರೆ ವಿಫಲವಾಗಲಿಲ್ಲ. ಶಿಷ್ಯರು ಒಬ್ಬೊಬ್ಬರಾಗಿ ಅವರ ಬಳಿಗೆ ಬರತೊಡಗಿದರು.

ಈ ವೇಳೆಗೆ ರಾಮಕೃಷ್ಣರಿಗೆ ಕೇಶವಚಂದ್ರಸೇನನ ಪರಿಚಯವಾಗಿತ್ತು. ಅವನು ಬ್ರಹ್ಮ ಸಮಾಜದ ಮುಖಂಡ. ರಾಮಕೃಷ್ಣರಿಂದ ತುಂಬ ಪ್ರಭಾವಿತನಾಗಿದ್ದ. ಅವನು ಪತ್ರಿಕೆಗಳಲ್ಲಿ ಅವರ ಬಗೆಗೆ ಬರೆದು ಅವರ ಹೆಸರು ಹೆಚ್ಚು ಪ್ರಚಾರವಾಗುವಂತೆ ಮಾಡಿದ. ಹೀಗಾಗಿ ಹಲವಾರು ಜನ ರಾಮಕೃಷ್ಣರ ಕಡೆಗೆ ಆಕರ್ಷಿತರಾದರು. ಅವರ ಸರಳ ವ್ಯಕ್ತಿತ್ವ, ಪ್ರೀತಿ ತುಂಬಿದ ನಡವಳಿಕೆ ಎಲ್ಲರಿಗೂ ಮೋಡಿ ಹಾಕಿದವು. ವಿದ್ಯಾವಂತರು ಅವಿದ್ಯಾವಂತರು ಎನ್ನದೆ ದಕ್ಷಿಣೇಶ್ವರಕ್ಕೆ ಬಂದುಹೋಗುವವರ ಸಂಖ್ಯೆ ಬೆಳೆಯಿತು.

ರಾಮಕೃಷ್ಣರ ಬಳಿಗೆ ಬರುತ್ತಿದ್ದ ಕಾಲೇಜು ವಿದ್ಯಾರ್ಥಿಗಳಲ್ಲಿ ಮುಖ್ಯವಾದವನೆಂದರೆ ನರೇಂದ್ರನಾಥ ದತ್ತ. ನರೇಂದ್ರನಿಗೆ ಚಿಕ್ಕಂದಿನಿಂದಲೂ ದೇವರು-ಧರ್ಮದ ಬಗೆಗೆ ಕುತೂಹಲ. ಅವನು ಕಲ್ಕತ್ತದ ಅನೇಕ ಪ್ರಸಿದ್ಧ

ವ್ಯಕ್ತಿಗಳನ್ನು ಕಂಡು ಈ ಬಗೆಗೆ ಪ್ರಶ್ನೆಗಳನ್ನು ಕೇಳಿದ್ದ. ಆದರೆ ಅವರಾರಿಂದಲೂ ಅವನಿಗೆ ಸಮಾಧಾನದ ಉತ್ತರ ದೊರೆತಿರಲಿಲ್ಲ. ಕೊನೆಗೆ ಒಂದು ದಿನ ನರೇಂದ್ರ ತನ್ನ ಪ್ರಾಧ್ಯಾಪಕರೊಬ್ಬರಿಂದ ರಾಮಕೃಷ್ಣರ ಹೆಸರನ್ನು ಕೇಳಿದ. ಈಗಾಗಲೇ ರಾಮಕೃಷ್ಣರ ಭಕ್ತನಾಗಿದ್ದ ಅವನ ಸಂಬಂಧಿ ರಾಮಚಂದ್ರ ದತ್ತನೂ ಅವನಿಗೆ ದಕ್ಷಿಣೇಶ್ವರಕ್ಕೆ ಹೋಗುವಂತೆ ಹೇಳಿದ. ನರೇಂದ್ರ ರಾಮಕೃಷ್ಣರನ್ನು ಭೇಟಿಯಾಗುವಂತಾದುದು ಹೀಗೆ.


ನರೇಂದ್ರ ರಾಮಕೃಷ್ಣರ ಕೋಣೆಯನ್ನು ಪ್ರವೇಶಿಸಿದಾಗ ಅವರು ಅವನನ್ನು ಹಳೆಯ ಪರಿಚಯಸ್ಥನೆಂಬಂತೆ ಬರಮಾಡಿಕೊಂಡರು. ಯಾವುದೋ ದಿವ್ಯಭಾವದಲ್ಲಿ ಮುಳುಗಿ, "ಅಯ್ಯೋ, ನೀನೆಷ್ಟು ತಡ ಮಾಡಿ ಬರುವುದೇ?ನನ್ನನ್ನು ಇಷ್ಟುದಿನ ಕಾಯಿಸುವುದಕ್ಕೆ ನಿನಗೆ ಮನಸ್ಸಾದರೂ ಹೇಗೆ ಬಂದಿತು?" ಎಂದೆಲ್ಲಾ ಹೇಳಿದಾಗ, ನರೇಂದ್ರನಿಗೆ ಏನು ಹೇಳಬೇಕೆಂದೇ ತಿಳಿಯಲಿಲ್ಲ. ಕೊನೆಗೆ ಅವರು ಅವನಿಗೆ ಕೈಮುಗಿದು "ನೀನು ಮಾನವಕೋಟಿಯ ದುಃಖವನ್ನು ಕಳೆಯಲು ಭೂಮಿಯಲ್ಲಿ ಜನಿಸಿದವನು" ಎಂದಾಗಲಂತೂ ಅವರಿಗೆ ಹುಚ್ಚು ಹಿಡಿದಿರಬೇಕೆಂದು ಅನಿಸಿತು. ಅವನಿಗೆ ಇಷ್ಟಾದರೂ ಅವರಲ್ಲಿ ಅದೇನೋ ಒಂದು ವಿಚಿತ್ರ ಆಕರ್ಷಣೆ ಅವನಿಗೆ. ಜೊತೆಗೇ, "ಈ ವ್ಯಕ್ತಿ ಮಹಾಪುರುಷ ಹೇಗಾದಾನು?" ಎಂಬ ಬೆರಗು. ಅವನು ಅವರನ್ನೇ ನೋಡುತ್ತ ಕುಳಿತಿದ್ದ. ಬಳಿಕ ಹಾಗೇ ಅವರ ಹತ್ತಿರಕ್ಕೆ ಸರಿದು, ತಾನು ಈವರೆಗೆ ಎಲ್ಲ ದೊಡ್ಡ ಮನುಷ್ಯರಿಗೂ ಹಾಕುತ್ತ ಬಂದಿದ್ದ ಪ್ರಶ್ನೆಯನ್ನೇ ಅವರಿಗೂ ಹಾಕಿದ:"ಮಹಾಶಯರೇ ತಾವು ದೇವರನ್ನು ಕಂಡಿದ್ದೀರಾ?" ಇದಕ್ಕೆ ರಾಮಕೃಷ್ಣರು ತಕ್ಷಣ ಉತ್ತರಿಸಿದರು :" ಹೌದು, ಕಂಡಿದ್ದೇನೆ. ನಾನೀಗ ನಿನ್ನನ್ನು ನೋಡುತ್ತಿರುವಷ್ಟೇ ಚೆನ್ನಾಗಿ ದೇವರನ್ನು ನೋಡಿದ್ದೇನೆ. ದೇವರನ್ನು ನೋಡಬಹುದು, ಅವನ ಜೊತೆ ಮಾತನಾಡಬಹುದು. ಆದರೆ ಅದು ಯಾರಿಗೆ ಬೇಕು? ಜನ ಪ್ರಪಂಚದ ಸುಖಕ್ಕಾಗಿ, ಹಣಕ್ಕಾಗಿ ಅತ್ತು ಗೋಳಾಡುತ್ತಾರೆ. ದೇವರಿಗಾಗಿ ಯಾರು ಅಳುತ್ತಾರೆ?"

ಈ ಮಾತು ನರೇಂದ್ರನ ಮೇಲೆ ತುಂಬ ಪರಿಣಾಮ ಬೀರಿತು. ಮೊಟ್ಟ ಮೊದಲ ಬಾರಿಗೆ ಅವನು ದೇವರನ್ನು ಕಂಡಿರುವೆನೆಂದ ವ್ಯಕ್ತಿಯನ್ನು ಕಂಡಿದ್ದ. ಅವರ ಪ್ರೀತಿಗಂತೂ ಅವನು ಮಾರುಹೋದ.

ದಿನ ಕಳೆದಂತೆ ನರೇಂದ್ರ ರಾಮಕೃಷ್ಣರ ಆಪ್ತ ಶಿಷ್ಯನಾದ; ಅವರ ಶಿಷ್ಯವೃಂದದ ನಾಯಕನೂ ಆದ. ಈತನೇ ಮುಂದೆ ರಾಮಕೃಷ್ಣರ ಸಂದೇಶವನ್ನು ಜಗತ್ತಿನಲ್ಲೆಲ್ಲ ಹರಡಿದ ಸ್ವಾಮಿ ವಿವೇಕಾನಂದ.

ಆಧ್ಯಾತ್ಮಿಕ ಸಲಹೆಗಾಗಿ ಜನ ಪ್ರತಿದಿನವೂ ರಾಮಕೃಷ್ಣರ ಬಳಿಗೆ ಬರುತ್ತಲೇ ಇದ್ದರು. ರಾಮಕೃಷ್ಣರು ಆಯಾಸವನ್ನು ಲೆಕ್ಕಿಸದೆ ಎಲ್ಲರಿಗೂ ನೆರವಾದರು. ಆದರೆ ಒಂದು ದಿನ ಅವರ ಗಂಟಲಿನಲ್ಲಿ ನೋವು ಕಾಣಿಸಿಕೊಂಡಿತು. ಅದು ಹೆಚ್ಚುತ್ತಲೇ ಹೋಯಿತು. ಚಿಕಿತ್ಸೆಯಿಂದ ಪ್ರಯೋಜನವಾಗಲಿಲ್ಲ. ಕಲ್ಕತ್ತಕ್ಕೆ ಹತ್ತಿರದಲ್ಲೇ ಇದ್ದರೆ ಚಿಕಿತ್ಸೆಗೆ ಅನುಕೂಲ ಎಂದು ವೈದ್ಯರು ಹೇಳಿದರು. ಆದ್ದರಿಂದ ಸಾವಿರದ ಎಂಟುನೂರಾ ಎಂಬತ್ತೈದರ ಅಕ್ಟೋಬರ್ ತಿಂಗಳಿನಲ್ಲಿ ಅವರನ್ನು ಕಲ್ಕತ್ತಕ್ಕೆ ಕರೆದುಕೊಂಡು ಹೋಗಲಾಯಿತು. ರಾಮಕೃಷ್ಣರ ಹಲವಾರು ಯುವಭಕ್ತರು ಅವರ ಸೇವೆಗೆ ಮುಂದಾಗಿ ಬಂದರು. ಹಿರಿಯರು ಖರ್ಚುವೆಚ್ಚ ನೋಡಿಕೊಳ್ಳುತ್ತಿದ್ದರು. ಈ ವೇಳೆಗೆ ರಾಮಕೃಷ್ಣರ ಶಿಷ್ಯರೆಲ್ಲರೂ ಅವರ ಸುತ್ತ ಸೇರಿದ್ದರು.

ಸಾವಿರದ ಎಂಟುನೂರಾ ಎಂಬತ್ತಾರು ಆಗಸ್ಟ್ ತಿಂಗಳು, ರಾಮಕೃಷ್ಣರು ಜಗತ್ತಿನಿಂದ ತೆರಳುವ ದಿನ ಹತ್ತಿರವಾಗುತ್ತಿತ್ತು. ಶಿಷ್ಯರು ರಾಮಕೃಷ್ಣರಿಗೆ ಕಾಯಿಲೆ ವಾಸಿಯಾಗಲು ಜಗನ್ಮಾತೆಯನ್ನು ಪ್ರಾರ್ಥಿಸಿಕೊಳ್ಳುವಂತೆ ಕೇಳಿಕೊಂಡರು. ಅದಕ್ಕೆ ರಾಮಕೃಷ್ಣರೆಂದರು :"ಏನು? ಈ ದೇಹದ ಸಲುವಾಗಿ ಜಗನ್ಮಾತೆಯನ್ನು ಕೇಳಿಕೊಳ್ಳುವುದೆ? ನಾನವಳನ್ನು ಅದನ್ನೆಲ್ಲ ಕೇಳಲಾರೆ!" ಈಗ ಅವರ ನಿರ್ಧಾರ ಶಿಷ್ಯರಿಗೂ ತಿಳಿಯಿತು.



ಜನ ಸಮೂಹಕ್ಕೆ ರಾಮಕೃಷ್ಣರ ಉಪದೇಶ

ಒಂದು ದಿನ ನರೇಂದ್ರ ರಾಮಕೃಷ್ಣರ ಪಕ್ಕದಲ್ಲಿ ಕುಳಿತು, "ಇವರು ನಿಜಕ್ಕೂ ಅವತಾರಪುರುಷರೆ? ಇದನ್ನು ನಂಬುವುದು ಹೇಗೆ?" ಎಂದು ಯೋಚಿಸುತ್ತಿದ್ದ. ಅವನ ಮನಸ್ಸಿನಲ್ಲಿ ಈ ಭಾವನೆ ಬಂದಿತೋ ಇಲ್ಲವೋ, ರಾಮಕೃಷ್ಣರು ಹೇಗೋ ಶಕ್ತಿ ತಂದುಕೊಂಡು ಸ್ಪಷ್ಟವಾಗಿ ಹೇಳಿದರು :" ನರೇನ್, ಈಗಲೂ ನಿನಗೆ ಸಂಶಯವೇ ? ಯಾರು ರಾಮನಾಗಿದ್ದನೋ, ಯಾರು ಕೃಷ್ಣನಾಗಿದ್ದನೋ, ಅವನೇ ಈಗ ಈ ಶರೀರದಲ್ಲಿ ರಾಮಕೃಷ್ಣನಾಗಿದ್ದಾನೆ." ತನಗೆ ಅಷ್ಟೆಲ್ಲ ಅನುಭವಗಳಾಗಿದ್ದರೂ ಮತ್ತೆ ಸಂಶಯಪಟ್ಟಿದ್ದಕ್ಕಾಗಿ ನರೇಂದ್ರನಿಗೆ ನಾಚಿಕೆಯಾಯಿತು.

ಸಾವಿರದ ಎಂಟುನೂರಾ ಎಂಬತ್ತಾರರ ಆಗಸ್ಟ ಹದಿನೈದು, ಭಾನುವಾರ. ಅಂದು ರಾತ್ರಿ ರಾಮಕೃಷ್ಣರ ದೇಹಸ್ಥಿತಿ ಬಹಳ ಕೆಟ್ಟಿತು. ಮಧ್ಯರಾತ್ರಿಯ ವೇಳೆಗೆ ಅವರು ಹಸಿವೆಯೆಂದು ಹೇಳಿ ಸ್ವಲ್ಪ ಪಾಯಸ ಕುಡಿದರು. ಬಳಿಕ ಮೂರು ಬಾರಿ ಕಾಳಿಯ ನಾಮವನ್ನು ಉಚ್ಚರಿಸಿ ಗಾಢ ಸಮಾಧಿಯಲ್ಲಿ ಮುಳುಗಿದರು. ಅವರ ದೇಹದಲ್ಲೊಮ್ಮೆ ವಿದ್ಯುತ್ ಹರಿದಂತಾಯಿತು.

ಅದೇ ಅವರ ಅಂತ್ಯ. ಅವರ ಭಕ್ತರೆಲ್ಲ ಅತ್ತರು. ಆದರೆ ಶರೀರವನ್ನು ಗಂಗೆಯ ದಡದಲ್ಲಿ ಅಗ್ನಿಗೆ ಅರ್ಪಿಸಿದ ಮೇಲೆ "ಜೈ ರಾಮಕೃಷ್ಣ!" ಎಂಬ ಕೂಗು ಗಗನವನ್ನು ಮುಟ್ಟಿತು.

ಇದು ರಾಮಕೃಷ್ಣರ ಜೀವನಕಥೆ. ತಮ್ಮ ಜೀವನದಲ್ಲಿ ಅವರೆಂದೂ ಪಾಂಡಿತ್ಯವನ್ನು ಮೆರೆಯಲಿಲ್ಲ. ಪುಸ್ತಕಗಳನ್ನು ಬರೆಯಲಿಲ್ಲ. ಸಾಮಾನ್ಯರಲ್ಲಿ ಅತ್ಯಂತ ಸಾಮಾನ್ಯರಾಗಿ ಅವರು ಬಾಳಿದರು. ಅವರ ಈ ಸಾಮಾನ್ಯತೆಯೇ ಅವರನ್ನು ಸಿದ್ಧಿಯ ತುತ್ತತುದಿಗೆ ಕೊಂಡೊಯ್ಯಿತು. ತಮ್ಮ ಜೀವನದಿಂದ ಹೊರತಾದ ಯಾವ ತತ್ತ್ವವನ್ನೂ ಅವರು ಉಪದೇಶಿಸಲಿಲ್ಲ. ಅವರು ಕೇವಲ ಬಾಳಿದರು. ಆ ಬಾಳಿಗೆ ಅರ್ಥ ಕೊಡುವುದನ್ನು ಅವರು ಇತರರಿಗೆ ಬಿಟ್ಟರು. ಈ ಅರ್ಥದಲ್ಲಿ ಅವರ ಜೀವನವೊಂದು ತೆರೆದ ಪುಸ್ತಕ. ಯಾವ ಮತಾಚಾರಗಳಿಗೂ ಕಟ್ಟುಬೀಳದೆ, ತಿಳಿವಳಿಕೆಗೆ ಯಾವ

ಗಡಿಗಳನ್ನೂ ಹಾಕಿಕೊಳ್ಳದೆ, ಎಲ್ಲೆಡೆಯಿಂದಲೂ ಬೆಳಕನ್ನು ಪಡೆದರು ; ಎಲ್ಲೆಡೆಗೂ ಬೆಳಕನ್ನು ನೀಡಿದರು.

ರಾಮಕೃಷ್ಣರ ಒಂದು ಪ್ರಸಿದ್ಧವಾದ ಕಥೆ ಹೀಗಿದೆ :

ಒಮ್ಮೆ ರಸ್ತೆಯಲ್ಲಿ ಕೆಲವರು ಕುರುಡರು ಹೋಗುತ್ತಿದ್ದರು. ಅಲ್ಲೇ ಒಂದು ದೊಡ್ಡ ಪ್ರಾಣಿ ನಿಂತಿರುವುದಾಗಿ ಅವರಿಗೆ ತಿಳಿದುಬಂತು. ಅವರಲ್ಲಿ ಒಬ್ಬ ದಾರಿಹೋಕನೊಬ್ಬನನ್ನು "ಅದಾವ ಪ್ರಾಣಿ? ಎಂದು ಕೇಳಿದ. ಅದಕ್ಕೆ ಆತ "ಅದು ದೇವಸ್ಥಾನದ ಆನೆ" ಎಂದು ಹೇಳಿ ತನ್ನ ಪಾಡಿಗೆ ಹೊರಟುಹೋದ.

ಆಗ ಆ ಕುರುಡರಲ್ಲೊಬ್ಬ ತನ್ನ ಸಂಗಡಿಗರನ್ನು "ಬನ್ನಿ ಆನೆ ಹೇಗಿರುತ್ತದೆ ನೋಡೋಣ!" ಎಂದು ಕರೆದುಕೊಂಡುಹೋದ. ಅದರ ಬಳಿಗೆ ಹೋದಾಗ ಒಬ್ಬ ಅದರ ಕಾಲನ್ನು ಮುಟ್ಟಿ, "ಓಹೋ, ಆನೆ ಕಂಭದಂತಿದೆ" ಎಂದ. ಇನ್ನೊಬ್ಬ ಅದರ ಕಿವಿಯನ್ನು ಮುಟ್ಟಿ, "ಇಲ್ಲ, ಇಲ್ಲ, ಆನೆ ಮೊರದಂತಿದೆ" ಎಂದ. ಆನೆಯ ಸೊಂಡಿಲನ್ನು ಮುಟ್ಟಿದವನು, "ಎಂಥ ಮೂರ್ಖರು ನೀವು! ಈ ಆನೆ ಹೆಬ್ಬಾವಿನಂತಿದೆ" ಎಂದ. ನಾಲ್ಕನೆಯವನು, "ನಿಮ್ಮದೆಲ್ಲ ತಪ್ಪು, ಆನೆ ಇರುವುದು ಹಂಡೆಯ ಹಾಗೆ" ಎಂದ. ಈತ ಆನೆಯ ಹೊಟ್ಟೆಯನ್ನು ಮುಟ್ಟಿದ್ದ.

ದೇವರ ಒಂದೇ ಒಂದು ಅಂಶವನ್ನು ಅರ್ಥಮಾಡಿಕೊಂಡು ಅದು ಮಾತ್ರವೇ ಸತ್ಯ, ತಮ್ಮ ಧರ್ಮಮಾತ್ರವೇ ಶ್ರೇಷ್ಠ ಎನ್ನುವವರೂ ಈ ಕುರುಡರಂತೆಯೇ. ನಿಜವಾಗಿ ದೇವರು ಅನಂತ. ಅವನನ್ನು ಯಾರೂ ವರ್ಣಿಸಲಾರರು.

ಇದು ಶ್ರೀರಾಮಕೃಷ್ಣರು ಸಾರಿದ ಸತ್ಯ. ಈ ಸತ್ಯ ನಮ್ಮೆಲ್ಲರ ಕಣ್ತೆರೆಸಲಿ!



ಕನ್ನಡ ವಿಶ್ವವಿದ್ಯಾಲಯವು ನವಸಾಕ್ಷರರಿಗೆ ಮತ್ತು ಪ್ರಾಥಮಿಕ ಹಂತದಿಂದ ಪದವಿ ಮಟ್ಟದವರೆಗೆ ಉತ್ತಮ ಹಾಗೂ ಉಪಯುಕ್ತವಾದ ಪಠ್ಯಪುಸ್ತಕಗಳನ್ನು ನಿರ್ಮಾಣ ಮಾಡುವ ಸಲುವಾಗಿ 'ಪಠ್ಯಪುಸ್ತಕ ರಚನಾ ವಿಭಾಗ'ವನ್ನು ತೆ [illegible] ಗಿ ಪಠ್ಯಪುಸ್ತಕ ರಚನೆ ಮಾಡಬೇಕೆಂದು [illegible] ಖೆ. ನವಸಾಕ್ಷರರಿಗಾಗಿ ಪುಸ್ತಕ ಬರೆಸುವ [illegible] ಮ್ಮಲ್ಲಿದ್ದ ಯೋಜನೆಯನ್ನು ಅವರು ನಮ [illegible] ಯಕ್ಕೆ ವಹಿಸಿಕೊಟ್ಟರು. ವಿಶ್ವವಿದ್ಯಾಲಯ [illegible] ಯೋಜನೆಯನ್ನು ಸಂತಸದಿಂದ ಸ್ವೀಕರಿಸಿ, ಕ [illegible] ಪ್ರಖ್ಯಾತ ಲೇಖಕರನ್ನು, ಭಾಷಾತಜ್ಞರನ್ನು, [illegible] ಜ್ಞರನ್ನು ಒಳಗೊಂಡಂತೆ ಸಲಹಾ ಸಮಿತಿಯ [illegible] ವರೆಲ್ಲರ ಅಭಿಪ್ರಾಯ, ಸಲಹೆ, ಸಹಕಾರ [illegible] ಕೇಳಿ ಕಾರ್ಯೋನ್ಮುಖವಾಯಿತು. ಪುಸ್ತಕಗಳ [illegible] ಮುದ್ರಣ ವಿನ್ಯಾಸ, ಚಿತ್ರಗಳ ಮಹತ್ವ [illegible] ತ್ಮಕ ಗುಣಮಟ್ಟ ಇತ್ಯಾದಿಗಳನ್ನು ಕುರಿತು ಸಮಿ [illegible] ಅನೇಕ ಸಲ ಚರ್ಚಿಸಿ ಯೋಜನೆಯನ್ನು [illegible] ನಗೊಳಿಸಲು ಸೂಚಿಸಿತು.

ನವಸಾಕ್ಷರರಿಗಾಗಿ [illegible] ದಲ್ಲಿ ಹಾಗೂ ದೇಶದ ಇತರ ಭಾಷೆಗಳಲ್ಲಿ [illegible] ಗೇ ಪ್ರಕಟವಾಗಿರುವ ಪುಸ್ತಕಗಳನ್ನೆಲ್ಲ [illegible] ಗೂಡಿಸಿ, ಅವುಗಳ ಮಾದರಿ, ಮಾಹಿತಿ [illegible] ಭಾಷಾತಜ್ಞರಿಂದ ಪರಿಶೀಲಿಸಲಾಯಿತು. ಜೊತೆಗೆ ಈ ಕ್ಷೇತ್ರದ ಅನುಭವಿ ಕ್ಷೇತ್ರಸಹಾಯಕರ [illegible] ಸಿಕೊಂಡು ಅವರಿಗೆ ಕಮ್ಮಟಗಳನ್ನು ನಡೆಸಿ, ಪ್ರಶ್ನಾವಳಿ ತಯಾರಿಸಿಕೊಟ್ಟು, ಅವರನ್ನು ರಾ [illegible] ತ ಆಯ್ದ ಜಿಲ್ಲೆ, ತಾಲೂಕುಗಳಿಗೆ ಕಳುಹಿಸಿ ಈ ಆಂದೋಲನದಲ್ಲಿ ಕಲಿತವರಿಂದ ಮತ್ತು ಕ [illegible] ರುವವರಿಂದ ಅದರ ಗುಣದೋಷಗಳ ಬಗ್ಗೆ ಅಭಿಪ್ರಾಯ ಸಲಹೆಗಳನ್ನು ಸಂಗ್ರಹಿಸಿ, ಅನಂತರ ಅವು [illegible] ವಿಶ್ವವಿದ್ಯಾಲಯದ ಗಣಕಯಂತ್ರದಲ್ಲಿ [illegible] ಸಲಾಯಿತು; ಮತ್ತೆ ಮತ್ತೆ ಕ್ಷೇತ್ರಗಳಿಗೆ ಹೋಗಿ, ಕ್ಷೆ [illegible] ಹಾಯಕರು ನೀಡಿದ್ದ ಮಾಹಿತಿಗಳನ್ನೆಲ್ಲ [illegible] ಪರಿಶೀಲನೆ ಮಾಡಿ, ನಂತರ ನವಸಾಕ್ಷರರ ಅಪೇಕ್ಷೆಗೆ [illegible] ಣವಾಗಿ ವಿಷಯದ ಆದ್ಯತೆಗಳನ್ನು ನಿ [illegible] ಂಡು ಪುಸ್ತಕ ರಚನೆಗೆ ತೊಡಗಲಾಯಿತು; ಪ್ರ [illegible] ಲೇಖಕರು ನಮ್ಮ ವಿಶ್ವವಿದ್ಯಾಲಯದ [illegible] ಕರ ಜೊತೆ ಚರ್ಚಿಸಿ ತಮ್ಮ ಹಸ್ತಪ್ರತಿಗಳಿಗೆ [illegible] ರೂಪ ಕೊಟ್ಟರು. ಕಲಾವಿದರು ವಿಷ [illegible] ವ [illegible] ಗಳನ್ನು ಬರೆದುಕೊಟ್ಟರ [illegible] ಹೀಗೆ ಸಿದ್ಧ [illegible] ಡ ಹಸ್ತಪ್ರತಿಗಳನ್ನು ನವಸಾಕ್ಷರರ ಬಳಿ [illegible] ಅವ [illegible] ಮುಂ [illegible] ಪರಿಶೀ [illegible] ನಂತರ [illegible] ವರ ಅಭಿಪ್ರಾಯ, ಪ್ರತಿಕ್ರಿಯೆಗಳನ್ನು ಅಳವಡಿಸಿ ಹಸ್ತಪ್ರತಿಯನ್ನು ಅಂತಿಮಗೊಳಿಸಲಾಯಿತು.

ನಮ್ಮ ಬಹುಸಂಖ್ಯಾತ ಸಮುದಾಯ ಅನಕ್ಷರಸ್ಥರೇ ಹೊರತು ಅವಿದ್ಯಾವಂತರಲ್ಲ. ನೃಪತುಂಗ ಹೇಳುವಂತೆ ಅವರು "ಚದುರರ್ ನಿಜದಿಂ ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣತ ಮತಿಗಳ್". ಅನುಭವದಲ್ಲಿ, ವಿವೇಕದಲ್ಲಿ, ವ್ಯವಹಾರದಲ್ಲಿ, ತಿಳುವಳಿಕೆಯಲ್ಲಿ ಆ ಜನ ಚದುರರು. ಹೀಗೆಂದು ಅವರನ್ನು ಅಕ್ಷರದಲಿತರನ್ನಾಗಿಯೂ ಉಳಿಸುವಂತಿಲ್ಲ. ಅವರಲ್ಲಿ ಅಕ್ಷರ ಕಲಿಯುವ ಸಾಮರ್ಥ್ಯವಿದೆ. ಕಲಿಸುವ ಹೊಣೆ ಸರ್ಕಾರಗಳ, ವಿಶ್ವವಿದ್ಯಾಲಯಗಳ ಮೇಲಿದೆ. ಈ ನಿಟ್ಟಿನಲ್ಲಿ ದೇಶದಾದ್ಯಂತ ಸಾಕ್ಷರತಾ ಆಂದೋಲನ ನಡೆಯುತ್ತಿದೆ. ಆದರೆ ಈ ಅಕ್ಷರ ಸಂಸ್ಕೃತಿಯ ಆಂದೋಲನದಲ್ಲಿ ಕಲಿತವರಿಗೆ ಮತ್ತು ಕಲಿಯುವವರಿಗೆ ಉತ್ತಮ ಗುಣಮಟ್ಟದ ಪುಸ್ತಕಗಳ ಅವಶ್ಯಕತೆ ಇದೆ. ಕಲಿತವರು ಮರೆಯದಂತೆ, ಕಲಿಕೆಯನ್ನು ಮುಂದುವರಿಸುವಂತೆ ನೋಡಿ ಕೊಳ್ಳುವುದು ಎಲ್ಲರ ಕರ್ತವ್ಯ.

ಕನ್ನಡ ವಿಶ್ವವಿದ್ಯಾಲಯವು ನಾಡಿನ ಹಲವು ವಿದ್ವಾಂಸರೊಂದಿಗೆ ಸೇರಿ ನಡೆಸಿದ ಒಂದು ಸಾಮೂಹಿಕ ಪ್ರಯತ್ನದ ಫಲವಾಗಿ ಈ ಪುಸ್ತಕ ರೂಪತಾಳಿದೆ. ನವಸಾಕ್ಷರರು ಈ ಪುಸ್ತಕವನ್ನು ಪ್ರೀತಿಯಿಂದ ಸ್ವೀಕರಿಸುತ್ತಾರೆಂದು ನಂಬಿದ್ದೇವೆ. ಈ ಯೋಜನೆಯ ಯಶಸ್ಸಿಗೆ ಕಾರಣರಾಗಿರುವ ಉನ್ನತ ಸಲಹಾ ಸಮಿತಿ ಹಾಗೂ ಸಂಪಾದಕ ಸಮಿತಿಯ ಸದಸ್ಯರಿಗೆ, ಲೇಖಕರಿಗೆ, ಕಲಾವಿದರಿಗೆ ಹಾಗೂ ಈ ಯೋಜನೆಯಲ್ಲಿ ಪ್ರತ್ಯಕ್ಷವಾಗಿ, ಪರೋಕ್ಷವಾಗಿ ನಮ್ಮೊಡನೆ ಪಾಲ್ಗೊಂಡವರೆಲ್ಲರಿಗೂ ನಮ್ಮ ಹೃತ್ಪೂರ್ವಕವಾದ ವಂದನೆಗಳು. ನಮ್ಮ ವಿಶ್ವವಿದ್ಯಾಲಯದ ಮೇಲೆ ವಿಶ್ವಾಸವಿಟ್ಟು ಇಂತಹ ಒಂದು ಗುರುತರವಾದ ಯೋಜನೆಯನ್ನು ವಹಿಸಿಕೊಟ್ಟ ಲೋಕಶಿಕ್ಷಣ ಇಲಾಖೆಯ ನಿರ್ದೇಶಕರಾದ ಶ್ರೀಲೂಕೋಸ್ ವಲ್ಲತ್ತರೈ ಅವರಿಗೆ ನನ್ನ ಕೃತಜ್ಞತೆಗಳು. ಓದುಗರು ಈ ಪುಸ್ತಕದ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ತಿಳಿಸಿದರೆ ನಮ್ಮ ಪಠ್ಯಪುಸ್ತಕ ರಚನೆಗೆ ಉಪಯೋಗವಾಗುತ್ತದೆ.

ಚಂದ್ರಶೇಖರ ಕಂಬಾರ
ಕುಲಪತಿಗಳು